# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 Volume:01 • ಸಂಚಿಕೆ:272 Issue:272 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 26.03.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



NOW HAMPI TIMES E-PAPER HAS BEEN REACHED
50,000 Plus readers
Place Your Ads here
Reach New Audience
9448633038 Contact For: News, Events Coverage, Ads
hampitimes@gmail.com Valmiki Circle, Hospete-583201



|| ಶ್ರೀ ಗುರು ಬಸವಲಿಂಗಾಯ ನಮಃ ||
ಹೊಸಪೇಟೆಯಲ್ಲಿ 1 ಏಪ್ರಿಲ್ 2024 ರಂದು ಸರ್ವ ಧರ್ಮ ಸಮನ್ವಯ ರಥೋತ್ಸವ
ಪೂಜ್ಯ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರ ಪಾವನಸಾನ್ನಿಧ್ಯದಲ್ಲಿ
ಸರ್ವಧರ್ಮ ದರ್ಶನ ಪ್ರವಚನ -2024
ಸ್ಥಳ: ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ
ದಿನಾಂಕ: 21-03-2024 ರಿಂದ 31-03-2024ರವರೆಗೆ ಸಂಜೆ: 7-00 ರಿಂದ 8.30ರವರೆಗೆ
ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು :
ಹರಿದು ಹೆದ್ದೊರೆಯು, ಕೆರೆ ತುಂಬಿದಂತಯ್ಯಾ
ನೆರೆಯದ ವಸ್ತು ನೆರೆವುದು ನೋಡಯ್ಯ,
ಅರಸು ಪರಿವಾರ ಕೈವಾರ ನೋಡಯ್ಯ.
ಪರಮ ನಿರಂಜನನ ಮರೆವ ಕಾಲಕ್ಕೆ,
ತುಂಬಿದ ಹರವಿಯ ಕಲ್ಲು ಕೊಂಡಂತೆ, ಕೂಡಲಸಂಗಮದೇವಾ
ಸರ್ವ ಧರ್ಮಿಯರ ಬರವೆಮೆಗೆ ಪ್ರಾಣ ಜೀವಾಳವಯ್ಯಾ


## ಪರಿಸರ ಪ್ರೇಮಿಗಳಿಂದ ಪುಷ್ಪದೋಕುಳಿ

### ಪರಿಸರ ಪ್ರೇಮ ಮೆರದ ಪತಂಜಲಿ ಪರಿವಾರ। ಸಾಕು ಪ್ರಾಣಿಗಳಿಗೂ ಬಣ್ಣದೂಗಳ ಸಮರ್ಪಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೋಳಿ ಹಬ್ಬ ಎಂದಾಕ್ಷಣ ಅಂಗಡಿಗಳಲ್ಲಿ ಮಾರಾಟ ಮಾಡುವ ರಾಸಾಯನಿಕಯುಕ್ತ ಬಣ್ಣ ಬಣ್ಣದ ಪಾಕೇಟ್‌ಗಳನ್ನು ಖರೀದಿಸಿ, ನೀರು ಇತರೆ ಬೆರೆಸಿ ಎರಚುವುದು ಸಹಜ. ಆದರೆ ಈ ಬಾಗಿ ವಿಜಯನಗರ ಜಿಲ್ಲಾ ಕೇಂದ್ರದಲ್ಲಿ ಪರಿಸರ ಪ್ರೇಮಿಗಳು ರಾಸಾಯನಿಕ ಬಣ್ಣವನ್ನು ತ್ಯಜಿಸಿ, ಪರಿಸರ ಬಣ್ಣ ಹಾಗೂ ಪುಷ್ಪದೋಕುಳಿಯಿಂದ ಪರಸ್ಪರ ಹಾಕಿ, ಹಾಕಿಸಿಕೊಂಡು ಪರಿಸರ ಕಾಳಜಿ ಮೆರೆದಿದ್ದಾರೆ.

ನಗರದ ಬಲ್ಡೋಟಾ ಪಾರ್ಕ್‌ನಲ್ಲಿ ಪತಂಜಲಿ ಪರಿವಾರ ಬಣ್ಣ ಬಣ್ಣದ ಹೂಗಳಿಂದ ಓಕುಳಿ ಆಡುವ ಮೂಲಕ ವಿಶಿಷ್ಠ ಆಚರಣೆಗೆ ಮುನ್ನುಡಿ ಬರೆಯಿತು. ಪತಂಜಲಿ ಯೋಗ ಸಮಿತಿಯ ದಕ್ಷಿಣ ಭಾರತ ಪ್ರಭಾರಿ ಭವರ್‌ಲಾಲ್ ಆರ್ಯ ಅವರ ಮಾರ್ಗದರ್ಶನದಲ್ಲಿ ನಡೆದ ಈ ವಿಶಿಷ್ಟ ಕಾರ್ಯಕ್ರಮಕ್ಕೆ ಪತಂಜಲಿ ಪರಿವಾರದ ನೂರಾರು ಜನ ಹೂವಿನ ಪಕಳೆಗಳನ್ನು ಪರಸ್ಪರ ಎರಚಿ, ಹೋಳಿಯ ಶುಭಾಶಯ ಪರಸ್ಪರ ಕೋರಿದರು. ಕೆಲವರು ನೈಸರ್ಗಿಕ ಬಣ್ಣ ಬಳಸಿ ಸಂಭ್ರಮಪಟ್ಟರು.

ಪತಂಜಲಿ ಪರಿವಾರ ಪ್ರಮುಖರಾದ ಭವರಲ್‌ಲಾಲ್ ಆರ್ಯ ಮಾತನಾಡಿ, ರಾಸಾಯನಿಕ ಬಣ್ಣ ಬಳಸುವುದರಿಂದ ಹಲವಾರು ಕಾಯಿಲೆಗಳನ್ನು ಆಹ್ವಾನಿಸಿದಂತಾಗುತ್ತದೆ. ನಾನಾ ರಾಸಾಯನಿಕಯುಕ್ತ ಬಣ್ಣಗಳನ್ನು ಬಳಸುವುದರಿಂದ ಚರ್ಮರೋಗಗಳು ಕಾಣಿಸಿಕೊಂಡಿವೆ. ಬಣ್ಣ ಬಣ್ಣದ ಹೂವಿನ ಪಕಳೆಗಳಿಂದಲೇ ಓಕುಳಿ ಆಡುವುದರಲ್ಲಿ ಸಂಭ್ರಮ ಕಾಣಲು ಸಾಧ್ಯವಿದೆ. ಹೊಸಪೇಟೆ ನಗರದಲ್ಲಿ ಆಚರಿಸುವ ಮೂಲಕ ಇತರರಿಗೆ ಮಾದರಿಯಾಗಿದೆ. 'ಹೋಳಿ ಎಂದರೆ ಎಲ್ಲರೂ ಜಾತಿ, ಮತ ಭೇದ ಮರೆತು ಆಚರಿಸುವ ಸಂಭ್ರಮ. ನಾವೆಲ್ಲರೂ ಒಂದೇ ಎಂಬ ಭಾವ ಈ ಹಬ್ಬದಲ್ಲಿ ಅಡಗಿದೆ. ನಮ್ಮ ಆಚರಣೆಗಳು ಪ್ರಕೃತಿಗೆ ಪೂರಕವಾಗಿದ್ದಾಗ ಪರಿಸರ ಶುದ್ಧವಾಗಿರುತ್ತದೆ, ನಮ್ಮ ಆರೋಗ್ಯವೂ ವೃದ್ಧಿಸುತ್ತದೆ' ಎಂದು ತಿಳಿಸಿದರು.

'ಹೊಸಪೇಟೆ ಯೋಗ ಸಾಧನೆಯಲ್ಲಿ ಇತರ ಕಡೆಗಳಿಗೆ ಮಾದರಿ ಎಂಬುದನ್ನು ನಾನು ಹಲವು ಬಾರಿ ಹೇಳಿದ್ದೇನೆ. ಇಲ್ಲಿ 28ಕ್ಕೂ ಅಧಿಕ ಸ್ಥಳಗಳಲ್ಲಿ ಉಚಿತ ಯೋಗ ಶಿಬಿರ ನಡೆಯುತ್ತಿದೆ. ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಯೋಗ ಶಿಬಿರ ಹೊಸ ಕ್ರಾಂತಿಯನ್ನೇ ಮಾಡಿಬಿಟ್ಟಿದೆ. ಯೋಗ ಉತ್ಸಾಹಿಗಳ ಸಹಕಾರದಿಂದ ಎಲ್ಲದೂ ಇಲ್ಲಿ ಸಾಧ್ಯವಾಗುತ್ತಿದೆ. ಈ ಪರಂಪರೆ ಇನ್ನಷ್ಟು ವಿಸ್ತರಿಸಬೇಕು ಎಂಬುದು ನಮ್ಮೆಲ್ಲರ ಆಶಯ' ಎಂದು ಭವರ್‌ಲಾಲ್ ಆರ್ಯ ಹೇಳಿದರು.

ಬೆಳಿಗ್ಗೆ 5.15ರಿಂದ 6.45ರವವರೆಗೆ ನಿತ್ಯದಂತೆ ಯೋಗಾಭ್ಯಾಸ ನಡೆದ ಬಳಿಕ ಹೋಳಿ ಆಚರಣೆ ನಡೆಯಿತು. ಮೊದಲಿಗೆ ವಿವಿಧ ಯೋಗ ಶಿಬಿರಗಳ ಸಂಚಾಲಕರಿಗೆ ಹೂವಿನ ಹಾರ ಹಾಕಿ ಗೌರವಿಸಿದ ಭವರ್‌ಲಾಲ್ ಆರ್ಯ ಅವರು, ಬಳಿಕ ಜನರ ನಡುವೆಯೇ ತೆರಳಿ ಹೂಗಳನ್ನು ಎರಚಿ ಹೋಳಿ ಆಚರಣೆಗೆ ಚಾಲನೆ ಹಾಡಿದರು.



ಪತಂಜಲಿ ಯೋಗ ಸಮಿತಿಯ ವಿಜಯನಗರ ಜಿಲ್ಲಾ ಪ್ರಭಾರಿ ಡಾ.ಎಫ್.ಟಿ.ಹಳ್ಳಿಕೇರಿ, ಬಳ್ಳಾರಿ ಪ್ರಭಾರಿ ರಾಜೇಶ್ ಕಾರ್ವಾ, ಯುವ ಭಾರತದ ರಾಜ್ಯ ಪ್ರಭಾರಿ ಕಿರಣ್ ಕುಮಾರ್, ಯೋಗ ಸಾಧಕರಾದ ಬಾಲಚಂದ್ರ ಶರ್ಮಾ, ಎಚ್.ಶ್ರೀನಿವಾಸ ರಾವ್, ಮಂಗಳಮ್ಮ, ಡಾ.ಮಲ್ಲಿಕಾರ್ಜುನ, ಶಿವಮೂರ್ತಿ, ಅಶೋಕ್ ಚಿತ್ರಗಾರ್, ಅನಂತ ಜೋಷಿ, ವಿವಿಧ ಯೋಗ ಕೇಂದ್ರಗಳ ಸಂಚಾಲಕರು ಇದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ: ಸ್ವಾತಂತ್ರ್ಯ ಉದ್ಯಾನದಲ್ಲಿ ಸಹ ನಿತ್ಯದ ಯೋಗಾಭ್ಯಾಸದ ಬಳಿಕ ಸಂಭ್ರಮದಿಂದ ಹೋಳಿ ಅಚರಿಸಲಾಯಿತು. ಇಲ್ಲೂ ಸಹ ನೈಸರ್ಗಿಕ ಬಣ್ಣವನ್ನಷ್ಟೇ ಬಳಸಲಾಯಿತು. ಪರಸ್ಪರ ಬಣ್ಣ ಹಚ್ಚಿ, ಹಾಡುಗಳಿಗೆ ನೃತ್ಯ ಮಾಡಿದ ಯೋಗಪಟುಗಳು ಸಂಚಾಲಕ ಶ್ರೀರಾಮ ನೇತೃತ್ವದಲ್ಲಿ ಭ್ರಮಿಸಿದರು.

ನಗರದ ಅನೇಕ ಕಡೆ ಯುವಕರು, ಮಹಿಳೆಯರು ಪರಸ್ಪರ ಬಣ್ಣ ಎರಚಿ ಸಂಭ್ರಮಿಸಿದರು. ಪ್ರಾಣಿ ಪ್ರಿಯರು ತಮ್ಮ ಸಾಕು ಪ್ರಾಣಿಗಳಿಗೂ ಪುಷ್ಪ ಹಾಕಿ ಪುಷ್ಪದೋಕುಳಿ ಮೂಲಕ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಹಂಪಿಯಲ್ಲಿ ಓಕುಳಿ ಆಡಲು ಹೋದವರು, ಸಪ್ಪೆ ಮುಖಹಾಕಿಕೊಂಡು ಮರಳಿದರು. ಸೋಮವಾರದ ಬದಲಿಗೆ ಮಂಗಳವಾರ ಹಂಪಿ ಸೇರಿದಂತೆ ಇತರೆಡೆಗಳಲ್ಲಿ ಹೋಳಿ ಜರುಗಲಿದೆ.

## ಮೈಕ್ರೋ ನ್ಯೂಸ್

### 10ನೇ ಪರೀಕ್ಷೆಗೆ ಶೇ. 98.57 ವಿದ್ಯಾರ್ಥಿಗಳು ಹಾಜರ್



**ಹಂಪಿ ಟೈಮ್ಸ್ ಹೊಸಪೇಟೆ**

ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭದ ದಿನ ಸೋಮವಾರ ಜಿಲ್ಲೆಯಲ್ಲಿ ಒಟ್ಟು ನೊಂದಾಯಿತಿ 20621 ವಿದ್ಯಾರ್ಥಿಗಳ ಪೈಕಿ 20347 ವಿದ್ಯಾರ್ಥಿಗಳು ಹಾಜಾರಿಗಿದ್ದು, 294 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಕೂಡ್ಲಿಗಿಯಲ್ಲಿ 97 ವಿದ್ಯಾರ್ಥಿಗಳು ಗೈರಾದರೆ, ಹೊಸಪೇಟೆಯಲ್ಲಿ 96, ಹರಪನಹಳ್ಳಿಯಲ್ಲಿ 38, ಎಚ್.ಬಿ.ಹಳ್ಳಿಯಲ್ಲಿ 33 ಮತ್ತು ಹೂವಿನ ಹಡಗಲಿಯಲ್ಲಿ 30 ವಿದ್ಯಾರ್ಥಿಗಳು ಮೊದಲ ದಿನದ ಪ್ರಥಮ ಭಾಷಾ ಪರೀಕ್ಷೆಗೆ ಗೈರಾಗಿದ್ದಾರೆ. ಪರೀಕ್ಷಾ ಕೇಂದ್ರಗಳಿಗೆ ಜಿಪಂ ಸಿಇಒ ಬಿ.ಸದಾಶಿವ ಭೇಟಿ ನೀಡಿ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ವಿದ್ಯಾರ್ಥಿಗಳಿಗೆ ಶುಭಕೋರಿದರು.

### ಕನ್ನಡ ಪರೀಕ್ಷೆಗೆ 265 ವಿದ್ಯಾರ್ಥಿಗಳು ಗೈರು

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಪ್ರಾರಂಭವಾಗಿದ್ದು, ಜಿಲ್ಲೆಯ ಒಟ್ಟು 61 ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತಿದೆ. ಮಾ.25 ರಂದು ಸೋಮವಾರ ಕನ್ನಡ ಭಾಷಾ ವಿಷಯ ಪರೀಕ್ಷೆ ನಡೆದಿದ್ದು, ಜಿಲ್ಲೆಯಲ್ಲಿ 21,461 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದರು. ಈ ಪೈಕಿ 21,196 ವಿದ್ಯಾರ್ಥಿಗಳು ಹಾಜರಾಗಿದ್ದು, 265 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ (ಆಡಳಿತ) ಉಮಾದೇವಿ ಅವರು ತಿಳಿಸಿದ್ದಾರೆ.

## ಶ್ರೀ ಬಂಡೇರಂಗನಾಥೇಶ್ವರ ಸ್ವಾಮಿ ರಥೋತ್ಸವ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲ್ಲೂಕಿನ ತಂಬ್ರಹಳ್ಳಿಯ ಇತಿಹಾಸ ಪ್ರಸಿದ್ಧ ಶ್ರೀ ಬಂಡೇರಂಗನಾಥೇಶ್ವರ ಸ್ವಾಮಿಯ ರಥೋತ್ಸವವು ವಿವಿಧೆಡೆಯಿಂದ ಆಗಮಿಸಿದ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಪ್ರತಿ ವರ್ಷ ಪಾಲ್ಗುಣ ಮಾಸದ ಹೋಳಿ ಹುಣ್ಣಿಮೆಯಂದು ಜರುಗುವ ಈ ರಥೋತ್ಸವ ಹಾಗೂ ಜಾತ್ರಾ ಮಹೋತ್ಸದ ಅಂಗವಾಗಿ ಬೆಟ್ಟದಲ್ಲಿ ಒಡಮೂಡಿದ ರಂಗನಾಥೇಶ್ವರನಿಗೆ ಕಳೆದ ಒಂದು ವಾರದಿಂದಲೇ ಪೂಜಾ ಕೈಂಕರ್ಯಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಬೆಳಗ್ಗೆ ಶ್ರೀಬಂಡೇ ರಂಗನಾಥೇಶ್ವರ ಹಾಗೂ ಲಕ್ಷ್ಮಿ ದೇವಿಗೆ ಪಂಚಾಭಿಷೇಕ, ರುದ್ರಾಭಿಷೇಕ ನಡೆದವು.

ಸಾಯಂಕಾಲ ದೇವಸ್ಥಾನ ಕಮಿಟಿಯ ಗೌರವಾಧ್ಯಕ್ಷರು ಹಾಗೂ ಸುಕ್ಷೇತ್ರ ನಂದಿಪುರ ಮಠದ ಡಾ.ಮಹೇಶ್ವರ ಸ್ವಾಮೀಜಿಯವರ ನೇತೃತ್ವದಲ್ಲಿ ರಂಗನಾಥೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿ, ಬಳಿಕ ನಾನಾ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಬೆಟ್ಟದ ಮೇಲಿಂದ ರಥ ಎಳೆಯುವ ಸ್ಥಳಕ್ಕೆ ತರಲಾಯಿತು. ಬೃಹತ್ ಗಾತ್ರದ ಹೂವಿನ ಹಾರಗಳು ಹಾಗೂ ತಳಿರು ತೋರಣಗಳಿಂದ ಅಲಂಕೃತವಾದ ಸುಂದರವಾಗಿ ಕಂಗೊಳಿಸುವ ರಥದ ಸುತ್ತಲೂ ಮೂರು ಸುತ್ತು ಪ್ರದಕ್ಷಿಣೆ ಹಾಕಲಾಯಿತು. ಬಳಿಕ ದೇವರ ಪಟ ಹರಾಜಿನಲ್ಲಿ ತಂಬ್ರಹಳ್ಳಿಯ ಸುಣಗಾರ ಹನುಮಂತ 1ಲಕ್ಷದ 81 ಸಾವಿರ ರೂಗಳಿಗೆ ಪಡೆದುಕೊಂಡರು. ಈ ವೇಳೆ ಕಮಿಟಿಯ ಪದಾಧಿಕಾರಿಗಳು, ವಿವಿಧೆಡೆಯಿಂದ ಸಹಸ್ತ ಭಕ್ತರು ಆಗಮಿಸಿದ್ದರು.




14 ಭಾಷೆ
ಈಗ ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com


## ಪರೀಕ್ಷಾರ್ಥಿಗಳಿಗೆ ಶುಭಕೋರಿದ ಸದಸ್ಯರು



**ಹಂಪಿ ಟೈಮ್ಸ್ ಕೂಡ್ಲಿಗಿ**

ಹತ್ತನೆ ತರಗತಿ ಪರೀಕ್ಷೆ ಬರೆಯಲು ಸೋಮವಾರ ವಿವಿಧ ಶಾಲೆಗಳಿಂದ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿದ ವಿದ್ಯಾರ್ಥಿಗಳಿಗೆ ಗುಡೇಕೋಟೆ ಗ್ರಾಪಂ ಅಧ್ಯಕ್ಷ ಎನ್. ಕೃಷ್ಣ ಮತ್ತು ಸದಸ್ಯರು ಗುಲಾಬಿ ಹೂ ನೀಡುವ ಮೂಲಕ ಸ್ವಾಗತಿಸಿ, ಯಾವುದೇ ಭಯ ಇಲ್ಲದೆ ನಿರ್ಭೀತಿಯಿಂದ ಪರೀಕ್ಷೆ ಬರೆಯುವಂತೆ ಶುಭ ಕೋರಿದರು.

ಗುಡೇಕೋಟೆ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಹೂ ಗುಚ್ಛ ನೀಡಿ ಮಾತನಾಡಿದ ಅಧ್ಯಕ್ಷ ಎನ್. ಕೃಷ್ಣ, ಎಸ್‌ಎಸ್‌ಎಲ್ ಸಿ ಪರೀಕ್ಷೆಯು ವಿದ್ಯಾರ್ಥಿಗಳಿಗೆ ಮಹತ್ವದ ಘಟ್ಟ. ಆದ್ದರಿಂದ ಪಾಲಕರು ಒತ್ತಡ ಹೇರದೆ ನಿರ್ಭೀತಿಯಿಂದ ಪರೀಕ್ಷೆ ಬರೆಯಲು ಸಹಕಾರ ನೀಡಬೇಕು. ವರ್ಷ ಕಾಲ ಪ್ರೋತ್ಸಾಹ ನೀಡಿ ವಿದ್ಯೆ ಕಲಿಸಿದ ಗುರುಗಳಿಗೆ ಕೃತಜ್ಞತೆ ಸಲ್ಲಿಸುವ ಪರೀಕ್ಷೆಯಾಗಿದೆ.

ವಿದ್ಯಾರ್ಥಿಗಳು ಧೈರ್ಯದಿಂದ ಪರೀಕ್ಷೆ ಬರೆದು ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ರವರ ಆಶಯದಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಉನ್ನತ ವಿದ್ಯೆಯೊಂದಿಗೆ ಅಧಿಕಾರ ಹಿಡಿದು ಜನರಿಗೆ ಉತ್ತಮ ಸೇವೆ ನೀಡುವ ಮೂಲಕ ದೇಶದ ಜವಾಬ್ದಾರಿಯುತ ಪ್ರಜೆಯಾಗಬೇಕು ಎಂಬ ಬಾಬಾ ಸಾಹೇಬ್ ಅವರ ಕನಸನ್ನು ನನಸು ಮಾಡಬೇಕು ಎಂದು ಸಲಹೆ ನೀಡಿದರು.

ಎಸ್‌ಎಸ್‌ಎಲ್ ಸಿ ಪರೀಕ್ಷಾ ಕೇಂದ್ರದ ಅಧಿಕಾರಿ ಜಯಪಾರ್ವತಿ ಮಾತನಾಡಿ, ಗುಡೇಕೋಟೆ ಪರೀಕ್ಷಾ ಕೇಂದ್ರಕ್ಕೆ, ಚಂದ್ರಶೇಖರಪುರ, ಸರ್ವೋದಯ, ಮುರಾರ್ಜಿ ದೇಸಾಯಿ ವಸತಿ ಶಾಲೆ, ರಾಮಸಾಗರಹಟ್ಟಿ, ಗುಡೇಕೋಟೆ, ಮಹಾದೇವಪುರ ಪ್ರೌಢಶಾಲೆಗಳಿಂದ 471 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಆಗಮಿಸಿದ್ದು, ವಿದ್ಯಾರ್ಥಿಗಳು ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆದು ಉತ್ತಮ ಅಂಕ ಪಡೆಯುವುದರೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ತರಬೇಕು ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪೇಂಟ್ ತಿಪ್ಪೇಸ್ವಾಮಿ, ಉಮೇಶ್ ನಾಯ್ಕ, ಬೊಮ್ಮಣ್ಣ, ಮಂಜುನಾಥ್, ಮಲ್ಲಯ್ಯ ಫೈನಾನ್ಸ್ ನಾಗರಾಜ್, ಕರವೇ ಶಿವುಕುಮಾರ್, ವಾಟಾಳ್ ನಾಗರಾಜ್, ಎಂ,ನಾಗರಾಜ್, ಎಂ ರಾಜಣ್ಣ, ರಮೇಶ್, ಮಲ್ಲಯ್ಯ, ಲೋಕೇಶ್, ಜೆ.ರಮೇಶ್, ರಾಮಾಂಜಿನಿ, ಸಿ.ಎಸ್. ಪುರ ಕುಮಾರಸ್ವಾಮಿ, ಶಿಕ್ಷಕರಾದ ರೇವಣರಾದ್ಯ, ಶ್ರೀಕಾಂತ್, ಸೇರಿದಂತೆ ಸಿಬ್ಬಂದಿ ವರ್ಗದವರು ಇದ್ದರು.


Universal Financial Services
College Road Parwaz Plaza 2nd Floor Hospet - 583201
WANTED Tele Callers
Female Candidates Only
Freshers Or Experienced
Qualification: PUC, any DEGREE
Preffered Local Hospet Candidates Only.
Working Location-Hosapete
Communication skills required
Contact: 98861 50774



ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ
ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್‌ಎಸ್‌ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ
98441 25317
99861 33299



SUNDAY SPL ADVRTISEMENTS
HAMPI TIMES digital & print Media
GROW YOUR BUSINESS
SPECIAL OFFER
4 CLASSIFIED ADS @ JUST 2000/-
CONTACT FOR MORE INFORMATION
HAMPI TIMES KANNADA DAILY
# VALMIKI CIRLCE, HOSAPETE-583201 VIJAYANAGARA
94486 33038
BOOK NOW
www.hampitimes.com
epaper.hampitimes.com
hampitimes@gmail.com



|| ಶ್ರೀ ಸಿದ್ಧಿವಿನಾಯಕ ಪ್ರಸನ್ನ ||
ಕೇರಳ ಮಾಂತ್ರಿಕ ಜ್ಯೋತಿಷ್ಯರು
ಕೇರಳದ ಮಳಯಾಳ ಕುಟ್ಟಿಚಾತನ್ ಪದ್ಧತಿಯಿಂದ ಶೀಘ್ರ ಪರಿಹಾರ
9880956386
ವಿದ್ಯೇ ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ-ಪುರುಷ ಪ್ರೇಮವಿವಾಹಕ್ಕೆ ಯಂತ್ರ ಪೂಜೆ, ಮಾಟ-ಮಂತ್ರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಶೀಘ್ರ ಹಾಗೂ ಶಾಶ್ವತ ಪರಿಹಾರ ಶತಸಿದ್ಧ.
ಸಂಪರ್ಕಿಸಿರಿ: ಪಂ.ಪೊದುವಾಳ್ ಎಸ್.ಜೆ.ಅಣ್ಣಪ್ಪ ಕುಮಾರನ್, ಶ್ರೀಸಿದ್ಧಿವಿನಾಯಕ ದೇವಸ್ಥಾನ ಹತ್ತಿರ(ಮನೆ), ಹೊಸಪೇಟೆ, ವಿಜಯನಗರ ಜಿಲ್ಲೆ

## ವಚನ ಅರಿವು

### ಗುರು ಲಿಂಗ ಜಂಗಮ

**ಗುರು ವೈಭವಕ್ಕೆ ಸಿಕ್ಕಿದಾಗಲೆ ಶಿಷ್ಯಂಗೆ ನರಕ ಪ್ರಾಪ್ತಿ,**
**ಲಿಂಗ ಭಜನೆಗೆ ಸಿಕ್ಕಿದಾಗಲೆ ಮರಣಕ್ಕೊಳಗು.**
**ಜಂಗಮ ಜಂಗುಳಿಯಾಗಿ,**
**ಕಂಡಕಂಡವರಂಗಳಕ್ಕೆ ಜಂಘೆಯನಿಕ್ಕಲಾಗಿ, ನಿರಂಗಕ್ಕೆ ಹೊರಗು.**
**ಇಂತೀ ಇವರು ನಿಂದುದಕ್ಕೆ ಬಂಧವಿಲ್ಲದಿರಬೇಕು,**
**ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ.**
**– ಶಿವಲೆಂಕ ಮಂಚಣ್ಣ**

ಶರಣರು ಗುರು, ಲಿಂಗ, ಜಂಗಮಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿದ್ದಾರೆ. ಇವು ತತ್ವಕೇಂದ್ರಿತ ಪರಿಕಲ್ಪನೆಗಳು. ಜನರಿಗೆ ಲಿಂಗವನ್ನು ಕೊಟ್ಟು, ತತ್ವವನ್ನು ತಿಳಿಸಿ ಸರಿದಾರಿಯಲ್ಲಿ ನಡೆಯುವಂತೆ ಪ್ರೇರೇಪಿಸುವವನು ಗುರುವಾಗುತ್ತಾನೆ. ಗುರು ಡಂಬಾಚಾರಕ್ಕೆ ಸಿಕ್ಕು ಮೋಜಿನ ಜೀವನ ಬಯಸಿ ನಿಜತತ್ವವನ್ನು ಮರೆತು ವೈಭವದಿಂದ ಬದುಕಲು ಶ್ರೀಮಂತರನ್ನು ಭಕ್ತರಾಗಿಸಿಕೊಂಡು ಅವರಲ್ಲಿ ಅಂಗಲಾಚಿ ಬೇಡಿ ತಂದು ಬದುಕುವವನು ನಿಜಗುರುವಲ್ಲ. ಆಚಾರವಿಲ್ಲದವರಿಂದ ಉಪದೇಶ, ಲಿಂಗವನ್ನು ಪಡೆದರೆ ಶಿಷ್ಯನು ನರಕದಲ್ಲಿದ್ದಂತಾಗುತ್ತದೆ. ಶರಣತತ್ವವನ್ನು ಒಪ್ಪಿ ಭಕ್ತನಾಗಿ ಲಿಂಗ ಧರಿಸಿ ಲಿಂಗ ಸಾಧನೆ ಮಾಡುವ ಮೂಲಕ ತನ್ನ ಅರಿವನ್ನು ಕಂಡು ತಾನೇ ಲಿಂಗವಾಗುವುದು ಶರಣರ ಲಿಂಗತತ್ವವಾಗಿದೆ. ಆದರೆ ಕೇವಲ ಆಡಂಬರದ ಪೂಜೆ ಮಾಡುತ್ತ, ಭಜನೆ ಮಾಡಿದರೆ ಲಿಂಗಪೂಜೆಗೆ ಅರ್ಥವೆ ಇಲ್ಲ. ನಂಬದೆ ಸತ್ತಂತೆ. ಜಂಗಮ ಸಮಾಜವನ್ನು ಆಚಾರವಂತರನ್ನಾಗಿಸಲು ತತ್ವಬೋಧನೆ ಕಾಯಕದಲ್ಲಿ ತೊಡಗಿರುತ್ತದೆ. ಶರಣರ ವಿಚಾರಗಳನ್ನು ಮನೆ ಮನಗಳಿಗೆ ಮುಟ್ಟಿಸಲು ಜಂಗಮ ನಿಸ್ವಾರ್ಥವಾಗಿ ಸೇವೆ ಮಾಡಬೇಕು. ಶರಣರ ವಿಚಾರಗಳಾದ ಕಾಯಕ, ದಾಸೋಹ, ಲಿಂಗತತ್ವ, ಸಮಾಜಮುಖಿ ಚಿಂತನೆಗಳನ್ನು ತಿಳಿಸುತ್ತ ಸಮಾಜವನ್ನು ಸದಾ ಜಾಗೃತಿಯಲ್ಲಿಡಬೇಕು. ತಮ್ಮ ಹೊಟ್ಟೆ ಹೊರೆಯುವದಕ್ಕಾಗಿ ಕಂಡ ಕಂಡವರ ಅಂಗಳಕ್ಕೆ ಹೋಗಿ ಕಾಡಿ ಬೇಡಿ ತಂದು ತಿನ್ನುವವರಿಗೆ ಜಂಗಮರು ಎನ್ನಲಾಗದು. ಇಂತವರಿಗೆ ಮುಕ್ತಿಯೇ ಇಲ್ಲ. ಯಾವುದೇ ಮೋಹ, ಮಮಕಾರಗಳಿಗೆ ಒಳಗಾಗದೆ, ಸ್ವಾರ್ಥಕ್ಕಾಗಿ ನಡೆಯದೆ, ನುಡಿಯದೆ ಸಮಾಜದ ಏಳ್ಗೆಗಾಗಿ ಶ್ರಮಿಸುವವರು ಗುರು, ಲಿಂಗ, ಜಂಗಮರಾಗಿರುತ್ತಾರೆ. ಇವರು ಶಿವನನ್ನು ಅರಿಯಲು ನಮಗೆ ದಾರಿ ಬೆಳಕಾಗಿರುತ್ತಾರೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com M: 9448633038

## 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.
**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com M: 9448633038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ಬಹುಮುಖ ಕ್ರೀಡಾ ಸಾಧಕ

# ಬಸವರಾಜ್ ಹೊರಡ್ಡಿ

ಅನಿವಾರ್ಯತೆಗಳು ಒಮ್ಮೊಮ್ಮೆ ಬಲವಂತವಾಗಿ ಇಷ್ಟವಿಲ್ಲದ ಕ್ಷೇತ್ರದಲ್ಲಿ ತೊಡಗುವಂತೆ ಮಾಡುತ್ತದೆ,ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರಿದ ಆಸೆ ಮುಂದೊಂದು ದಿನ ಚಿಗುರಿ ಮರವಾಗುತ್ತದೆ.ಬಡತನವೆಂಬ ಬೇಗೆಯಲ್ಲಿ ಸಾಕಷ್ಟು ಬೆಂದು ಅನಿವಾರ್ಯತೆಗಳನ್ನು ಮೆಟ್ಟಿನಿಂತು ಸಾಧಿಸುವುದಿದೆಯಲ್ಲ ಅದು ನಿಜವಾದ ಸಾಧನೆ.

ಮುಧೋಳ(ತಾ)ಬಾಗಲಕೋಟೆ(ಜಿ)ಹಲಕಿ ಗ್ರಾಮದಲ್ಲಿ ಜನಿಸಿದ ಬಹುಮುಖ ಅಂತರಾಷ್ಟ್ರೀಯ ಕ್ರೀಡಾ ಸಾಧಕ ಬಸವರಾಜ್.ಟಿ-46(ಬಲಗೈ ಸಣ್ಣ)ಯಾವುದೇ ಕೆಲಸಕ್ಕೆ ಬಾರದ ಅಂಗ ನ್ಯೂನ್ಯತೆಯಿಂದ ಬಳಲುತ್ತಿದ್ದರು ತಾ ನು ಏನನ್ನಾದರೂ ಸಾಧಿಸಬೇಕು,ದೇಶಕ್ಕೆ ಕೀರ್ತಿ ತರುವಂತಾಗಬೇಕು ಎಂಬ ಇಚ್ಛೆಯಿಂದ ಕ್ರೀಡೆಯಲ್ಲಿ ತೊಡಗಿ ಕೊಳ್ಳುತ್ತಾರೆ.

ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಪಾಠಶಾಲೆ ಹಲಕಿಯಲ್ಲಿ ಪೂರೈಸಿ 5-7 ನೇ ತರಗತಿಯನ್ನು ಕೆಆರ್ ಲಕ್ಕಂ ಸ್ಕೂಲ್ ಮುಧೋಳ ನಂತರ 8-10 ಚಂದರಗಿ ಕ್ರೀಡಾ ಶಾಲೆಯಲ್ಲಿ ಓದುತ್ತಾರೆ.ಪಿ,ಯು,ಸಿ. ಮತ್ತು ಪದವಿ ಶಿಕ್ಷಣವನ್ನು ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಪಡೆದಿರುತ್ತಾರೆ.



ಇವರ ಕ್ರೀಡಾ ಜೀವನವೇ ಬಲು ರೋಚಕ ಇವರು ಪ್ರಾಥಮಿಕ ಶಾಲೆ ಓದುವ ಸಂದರ್ಭದಲ್ಲಿ 100 ಮೀ,ಓಟ ಮತ್ತು ಲಾಂಗ್ ಜಂಪ್ ನಲ್ಲಿ ರಾಜ್ಯವನ್ನ ಪ್ರತಿನಿಧಿಸಿ ರಿಲೇ ಓಟದಲ್ಲಿ 3ನೇಸ್ಥಾನವನ್ನು ಗಳಿಸಿರುತ್ತಾರೆ.

ಚಂದರಗಿ ಕ್ರೀಡಾ ಶಾಲೆಯ ಗೋಪಾಲ್ ಅಪ್ಪಿನ ಬೈಲು,ಆರ್ಕೆ ಪಡತರೆ ಇವರ ಓಡುವ ಶೈಲಿಯನ್ನು ಗಮನಿಸಿ ಕ್ರೀಡಾ ಶಾಲೆಗೆ ಬರುವಂತೆ ಪ್ರೇರೇಪಿಸುತ್ತಾರೆ ಶಾಲೆಗೆ ಕಟ್ಟಲು ಹಣವಿಲ್ಲವುದನ್ನು ಕಂಡು ಉಚಿತವಾಗಿ ಶಾಲೆಗೆ ದಾಖಲು ಮಾಡಿಕೊಳ್ಳುತ್ತಾರೆ.

ಮಾಗಿ ಸರ್ ದೈಹಿಕ ಶಿಕ್ಷಣ ಶಿಕ್ಷಕರು ಇವರಿಗೆ ಪ್ರಾಥಮಿಕ ಶಾಲೆಯ ಹಂತದಲ್ಲಿಯೇ ಓಟದ ಒಂದಿಷ್ಟು ಕೌಶಲ್ಯಗಳನ್ನು ಕಳಿಸಿದ್ದರು.

ಕ್ರೀಡಾ ಶಾಲೆಗೆ ಸೇರಿದ ತರುವಾಯ 1ವರ್ಷ ತರಬೇತಿ ಪಡೆದು ಪ್ಯಾರಾ ಸ್ಪೋರ್ಟ್ಸ್ ಗೆ ರಾಜ್ಯಮಟ್ಟಕ್ಕೆ ಆಯ್ಕೆಯಾಗುತ್ತಾರೆ ಮೈಸೂರಿನಲ್ಲಿ ನಡೆದ ಕ್ರೀಡಾಕೂಟದಲ್ಲಿ 100,200 ಮೀ,ಓಟದಲ್ಲಿ ಪ್ರಥಮ ಸ್ಥಾನವನ್ನು ಗಳಿಸುತ್ತಾರೆ.

**ಪ್ಯಾರಾ ಮೇಲಾಟಗಾರನಾಗಿ ಸಾಧನೆಗಳು**

**ಅಂತರಾಷ್ಟ್ರೀಯ ಮಟ್ಟ**

2018(ಶ್ರೀಲಂಕಾ) ಅಂತರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್ಶಿಪ್ 100 ಮೀ, ಓಟದಲ್ಲಿ ಕಂಚು, 2017(ನೇಪಾಳ)ಅಂತರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್ಶಿಪ್ 100 ಮೀ,ಓಟದಲ್ಲಿ ಬೆಳ್ಳಿ, 2014 (ಶಾರ್ಜಾ)4ನೇ ಶಾರ್ಜಾ ಅಥ್ಲೆಟಿಕ್ಸ್ ಚಾಂಪಿಯನ್ಶಿಪ್ 100 ಮೀ,ಓಟದಲ್ಲಿ ಭಾಗವಹಿಸುವಿಕೆ, 2010(ಇಂಗ್ಲೆಂಡ್)ಸಿ.ಪಿ ಇಂಟರ್ನ್ಯಾಷನಲ್ ಅಥ್ಲೆಟಿಕ್ ಚಾಂಪಿಯನ್ಶಿಪ್ 200, 400 ಮೀ, ಓಟದಲ್ಲಿ ತಲಾ ಒಂದೊಂದು ಬೆಳ್ಳಿ, 2009(ಭಾರತ) ಐ, ಡಬ್ಲ್ಯೂ,ಎ ,ಎಸ್. ವರ್ಲ್ಡ್ ಸೀನಿಯರ್ ಚಾಂಪಿಯನ್ಶಿಪ್ 4*400 ರಿಲೇ ಓಟದಲ್ಲಿ ಚಿನ್ನ, 2007(ತೈವಾನ್)1ನೇ ಇಂಟರ್ನ್ಯಾಷನಲ್ ಸ್ಪೋರ್ಟ್ಸ್ ಅಂಡ್ ಟ್ಯಾಲೆಂಟ್ ಮೀಟ್ ಫಾರ್ ದಿ ಚಾಲೆಂಜಡ್ ತ್ರಿವಿಧ ಜಿಗಿತದಲ್ಲಿ ಕಂಚಿನ ಪದಕ, 2007(ತೈವಾನ್)ಐ,ಡಬ್ಲ್ಯೂ ,ಎ, ಎಸ್.ವರ್ಲ್ಡ್ ಸೀನಿಯರ್ ಗೇಮ್ಸ್ ತ್ರಿವಿಧ ಜಿಗಿತ ಕಂಚು, 2006(ಆಸ್ಟ್ರೇಲಿಯಾ)18ನೇ ಕಾಮನ್ವೆಲ್ತ್ ಗೇಮ್ಸ್ 200 ಮೀ ಓಟದಲ್ಲಿ ಭಾಗವಹಿಸುವಿಕೆ, 2006 (ಐರ್ಲ್ಯಾಂಡ್) ಐ,ಡಬ್ಲ್ಯೂ, ಎ, ಎಸ್. ವರ್ಲ್ಡ್ ಜೂನಿಯರ್ ಗೇಮ್ಸ್ 100, 200ಮೀ, ಓಟದಲ್ಲಿ ಭಾಗವಹಿಸುವಿಕೆ, 2005(ಇಂಗ್ಲೆಂಡ್) ಡಿ,ಎಸ್,ಸಿ. ಬ್ರಿಟಿಷ್ ಓಪನ್ ಅಥ್ಲೆಟಿಕ್ ಚಾಂಪಿಯನ್ಶಿಪ್ 100, 200 ಮತ್ತು 400ಮೀ, ಓಟದಲ್ಲಿ ತಲಾ ಒಂದೊಂದು ಚಿನ್ನ, 2004(ಬೆಲ್ಜಿಯಮ್)ಬೆಲ್ಜಿಯಂ ಪ್ಯಾರಾ ಒಲಂಪಿಕ್ ಚಾಂಪಿಯನ್ಶಿಪ್ 100ಮೀ,ಓಟದಲ್ಲಿ ಚಿನ್ನ, 2006(ಮಲೇಶಿಯಾ) ಮಲೇಶಿಯಾ ಸ್ಪೆಸಿಫಿಕ್ಸ್ ಗೇಮ್ 100ಮೀ, ಓಟದಲ್ಲಿ ಭಾಗವಹಿಸುವಿಕೆ.

**ರಾಷ್ಟ್ರಮಟ್ಟದಲ್ಲಿ ಸಾಧನೆ**

-7ನೇ ಸೀನಿಯರ್ ನ್ಯಾಷನಲ್ ಪ್ಯಾರಾ ಒಲಿಂಪಿಕ್ಸ್ ಚಾಂಪಿಯನ್ಶಿಪ್ (ತಮಿಳುನಾಡು- 2005)400 ಮೀ, ಓಟ ಮತ್ತು ಲಾಂಗ್ ಜಂಪ್ ನಲ್ಲಿ ತಲಾ ಒಂದೊಂದು ಚಿನ್ನದ ಪದಕ, 8ನೇ ನ್ಯಾಷನಲ್ ಗೇಮ್ಸ್ ಫಾರ್ ಡಿಸೆಬಿಲ್ಡ್(2004-ಕರ್ನಾಟಕ)100, 200ಮೀ, ಓಟ ಹಾಗೂ ಉದ್ದ ಜಿಗಿತ ಸ್ಪರ್ಧೆಯಲ್ಲಿ ತಲಾ ಒಂದೊಂದು ಚಿನ್ನ,1ನೇ ಸೌತ್ ಅಥ್ಲೆಟಿಕ್ ಮೀಟ್ ಫಾರ್ ಡಿಜೇಬಲ್ಡ್(ಕರ್ನಾಟಕ-2004)100 ಮೀ,ಓಟ ಮತ್ತು ಗುಂಡು ಎಸೆತದಲ್ಲಿ ತಲಾ ಒಂದೊಂದು ಚಿನ್ನದ ಪದಕ,6ನೇ ಸೌತ್ ಸ್ಪೋರ್ಟ್ಸ್ ಮೀಟ್ ಫಾರ್ ಡಿಜೇಬಲ್ಡ್(ಕರ್ನಾಟಕ-2006)100, 200 ಮೀ,ಓಟದಲ್ಲಿ ಚಿನ್ನದ ಪದಕ,6ನೇ ಸೀನಿಯರ್ ನ್ಯಾಷನಲ್ ಚಾಂಪಿಯನ್ಶಿಪ್ ಫಾರ್ ಡೀಸೆಬಲ್ಡ್ (ಕರ್ನಾಟಕ-2006 )ಎತ್ತರ ಜಿಗಿತ ಚಿನ್ನ, 200ಮೀ,ಓಟದಲ್ಲಿ ಬೆಳ್ಳಿ,ಸೀನಿಯರ್ ಅಂಡ್ ಜೂನಿಯರ್ ನ್ಯಾಷನಲ್ ಪ್ಯಾರಾ ಅಥ್ಲೆಟಿಕ್ ಮೀಟ್ (ರಾಜಸ್ಥಾನ 2009)400ಮೀ, ಓಟದಲ್ಲಿ ಬೆಳ್ಳಿ.

10 ವರ್ಷಗಳ ಕಾಲ ಅಥ್ಲೆಟಿಕ್ಸ್ ನಲ್ಲಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಸಾಧನೆಗಳನ್ನು ಮಾಡಿ ಬಡತನ ಮತ್ತು ಕುಟುಂಬವನ್ನು ಸಲಹುವ ಕಾರಣದಿಂದಾಗಿ ಕ್ರೀಡೆಯಿಂದ ದೂರ ಉಳಿಯುವ ಅನಿವಾರ್ಯತೆ ಎದುರಾಗುತ್ತದೆ.

ನಾಲ್ಕು ವರ್ಷಗಳ ಕಾಲ ಕ್ರೀಡೆಗೆ ವಿದಾಯ ಹೇಳಿದರು ಸಹ ತಮ್ಮ ರಕ್ತದಲ್ಲಿ ಬೆರೆತಿದ್ದ ಸಾಧಿಸಬೇಕೆಂಬ ಹಂಬಲ 2018 ರಿಂದ ಸೈಕ್ಲಿಂಗ್ ಕ್ರೀಡೆಯಲ್ಲಿ ತೊಡಗುವಂತೆ ಮಾಡುತ್ತದೆ.

ಜೆ,ಕೆ ಸಿಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿಕೊಂಡು ದಿನನಿತ್ಯ 15 ಕಿಲೋಮೀಟರ್ ಸೈಕಲ್ ಓಡಿಸಿಕೊಂಡು ಕೆಲಸಕ್ಕೆ ತೆರಳುತ್ತಿದ್ದರು ಇದೇ ಇವರಿಗೆ ಮುಂದೆ ಅಂತರಾಷ್ಟ್ರೀಯ ಸಾಧಕನನ್ನಾಗಿ ಮಾಡಲು ಪ್ರೇರೇಪಣೆ ನೀಡಿರುತ್ತದೆ.

ದಿನಪತ್ರಿಕೆಯಲ್ಲಿ ಏಷ್ಯನ್ ಗೇಮ್ ಆಯ್ಕೆ ಆಂಧ್ರಪ್ರದೇಶದಲ್ಲಿದೆ ಎಂಬುದನ್ನು ಗಮನಿಸಿದ ಇವರು ಆಯ್ಕೆಗಾಗಿ 2018 ರಲ್ಲಿ ತೆರಳುತ್ತಾರೆ ಆದರೆ ಅಲ್ಲಿ ಆಯ್ಕೆಯಾಗಲು ಸಾಧ್ಯವಾಗುವುದಿಲ್ಲ.

ಛಲ ಬಿಡದೆ ಪ್ರಯತ್ನಿಸಿ ಮುಂದೆ ಸೈಕ್ಲಿಂಗ್ ನಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಾಧನೆಗಳನ್ನು ಮಾಡಿರುತ್ತಾರೆ ಅವುಗಳನ್ನು ನೋಡುವುದಾದರೆ

**ಸೈಕ್ಲಿಂಗ್ ನಲ್ಲಿ ಕ್ರೀಡಾ ಸಾಧನೆಗಳು**

ಸೈಕ್ಲಿಂಗ್ ತರಬೇತುದಾರರಾದ ಮಲ್ಲಪ್ಪ ,ಭೀಮ್ಶಿ ಮತ್ತು ಆದಿತ್ಯ ಮೆಹತಾ ಹೈದರಾಬಾದ್ ಇವರಿಂದ ಸೈಕ್ಲಿಂಗ್ ತರಬೇತಿಯನ್ನು ಪಡೆದು ಈ ಕೆಳಕಂಡಂತೆ ಸಾಧನೆಗಳನ್ನು ಮಾಡಿರುತ್ತಾರೆ.

**ಅಂತರಾಷ್ಟ್ರೀಯ ಮಟ್ಟದಲ್ಲಿ**

2024 (ದೆಹಲಿ)ಏಷಿಯನ್ ಪ್ಯಾರಾ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್ಶಿಪ್ ಟೀಮ್ ಸ್ಪ್ರಿಂಟ್ ವಿಭಾಗದಲ್ಲಿ ಬೆಳ್ಳಿ ಪದಕ,2022(ಫ್ರಾನ್ಸ್ )ಪ್ಯಾರಾ ಸೈಕ್ಲಿಂಗ್ ಟ್ರ್ಯಾಕ್ ಓಲ್ಡ್ ಚಾಂಪಿಯನ್ಶಿಪ್ ಟ್ರ್ಯಾಕ್ ಸೈಕ್ಲಿಂಗ್ ನಲ್ಲಿ ಭಾಗವಹಿಸುವಿಕೆ, 2022(ದೆಹಲಿ)ಏಶಿಯನ್ ಪ್ಯಾರಾ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್ಶಿಪ್-1 ಕಿ,ಮೀ, ಸೈಕ್ಲಿಂಗ್ ನಲ್ಲಿ ಕಂಚು,2022 (ತಜಕಿಸ್ಥಾನ್)ಏಷ್ಯನ್ ಪ್ಯಾರಾ ರೋಡ್, ಸೈಕ್ಲಿಂಗ್ ಚಾಂಪಿಯನ್ಶಿಪ್ 15 ಕಿ.ಮೀ ಸ್ಪರ್ಧೆಯಲ್ಲಿ 6ನೇ ಸ್ಥಾನ.

**ರಾಷ್ಟ್ರಮಟ್ಟದಲ್ಲಿ**

2020 (ಕರ್ನಾಟಕ) ಎಚ್ ಡಿ ಓ ಆರ್ ಫ್ರೀಡಂ ರೈಡ್ 10 ಕಿ.ಮೀ ದೂರದ ಸೈಕ್ಲಿಂಗ್ ಚಿನ್ನ,2021(ಕೇರಳ)1ನೇ ಪ್ಯಾರಾ ನ್ಯಾಷನಲ್ ಔಟ್ ಡೋರ್ ಗೇಮ್ಸ್ 20 ಕಿ.ಮೀ ದೂರದ ಸೈಕ್ಲಿಂಗ್ ನಲ್ಲಿ ಚಿನ್ನ.

**ಡುವಥ್ಲಾನ್ ನಲ್ಲಿ ರಾಷ್ಟ್ರೀಯ ಸಾಧನೆಗಳು**

ಈ ಮಾದರಿಯ ಕ್ರೀಡೆಯಲ್ಲಿ 5 ಕಿಲೋ ಮೀಟರ್ ದೂರದ ಓಟ,20 ಕಿಲೋ ಮೀಟರ್ ದೂರದ ಸೈಕ್ಲಿಂಗ್ ಮತ್ತೆ 2.5 ಕಿಲೋಮೀಟರ್ ದೂರದ ಓಟವನ್ನು ಪೂರೈಸಬೇಕು.

2020(ಹುಬ್ಬಳ್ಳಿ)ಟ್ವಿನ್ ಸಿಟಿ ಡುವಥ್ಲಾನ್ – ಬೆಳ್ಳಿ ಪದಕ,2020 (ಗೋವಾ)ಟ್ರೈ ಗೋವಾ ಡುವಥ್ಲಾನ್ – ಕಂಚಿನ ಪದಕ. 2019 (ಕೊಲ್ಲಾಪುರ) ಡಿ,ಎಸ್, ಸಿ. ಕೊಲ್ಲಾಪುರ ಡುವಥ್ಲಾನ್ – ಚಿನ್ನದ ಪದಕ. ರಾಜ್ಯಮಟ್ಟದ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿ 100,200 ಮೀಟರ್ ಓಟ,400 ಮೀಟರ್ ಹರ್ಡಲ್ಸ್ ಓಟ ಗಳಲ್ಲಿ ಭಾಗವಹಿಸಿ ಒಟ್ಟು 4ಚಿನ್ನ, 4 ಬೆಳ್ಳಿ, 2 ಕಂಚು ಪಡೆದಿರುತ್ತಾರೆ.



**ಪ್ರಶಸ್ತಿ ಪುರಸ್ಕಾರಗಳು**

-2022 ಕರ್ನಾಟಕ ಸರ್ಕಾರದ ವತಿಯಿಂದ 'ವಿಕಲಚೇತನ ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಿದೆ,2006ರಲ್ಲಿ 'ಯಂಗ್ ಅಚಿವರ್ ಅವಾರ್ಡ್' ಬ್ರಿಗೇಡ್ ಗ್ರೂಪ್ ಬೆಂಗಳೂರು ಇವರು ನೀಡಿ ಸನ್ಮಾನಿಸುತ್ತಾರೆ,2008-09 ರಲ್ಲಿ ಬಾಗಲಕೋಟೆ ಜಿಲ್ಲಾಡಳಿತದವತಿಯಿಂದ ಜಿಲ್ಲಾ ಕ್ರೀಡಾ ಪ್ರಶಸ್ತಿ ನೀಡಿ ಗೌರವಿಸಿದೆ.

ಕುಟುಂಬಸ್ಥರಾಗಿರುವ ಇವರು ತಮ್ಮ ಪೋಷಕರನ್ನು ಹಾಗೂ ಮಡದಿ ಮಕ್ಕಳನ್ನು ಸಾಕಿ ಸಲಹುವ ಜವಾಬ್ದಾರಿ ಹೊತ್ತಿರುತ್ತಾರೆ ಇದರ ಮಧ್ಯೆಯು ಕ್ರೀಡಾ ಸಾಧನೆಯನ್ನು ಮಾಡುವ ಮನಸ್ಸು ಕಡಿಮೆಯಾಗಿಲ್ಲ.

ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಿಗೆ ತೆರಳುವಾಗ ಜೆಕೆ ಸಿಮೆಂಟ್, ರನ್ ಶುಗರ್ ಫ್ಯಾಕ್ಟರಿ, ಡಿಸಿಸಿ ಬ್ಯಾಂಕ್ ನ ಅಧ್ಯಕ್ಷರಾದ ಅಜಯ್ ಕುಮಾರ್ ನಾಯಕ್, ದಯಾನಂದ ಪಾಟೀಲ್, ರಾಮಣ್ಣ ತಲೆವಾಡ, ಆಳ್ವಾಸ್ನ ತರಬೇತುದಾರರು ಹಾಗೂ ಆಡಳಿತ ಮಂಡಳಿಯವರು ಹಾಗೂ ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆ ಸರ್ವ ಸದಸ್ಯರು ನೀಡುತ್ತಿರುವ ಸಹಕಾರವನ್ನು ಸ್ಮರಿಸಿಕೊಳ್ಳುತ್ತಾರೆ.

ಕುಟುಂಬದವರು ಸಾಕಷ್ಟು ಕಷ್ಟಗಳನ್ನು ಅನುಭವಿಸಿದರು ಸಹ ನನಗೆ ನೆರವಾಗುತ್ತಿದ್ದಾರೆ ಸಮಾಜದಲ್ಲಿನ ನಾಗರಿಕರು ನಮ್ಮಂತವರಿಗೆ ಸಹಕಾರ ನೀಡಬೇಕು.

ಸರ್ಕಾರವು ವಿಶೇಷ ಚೇತನರಿಗೆ ನೆರವಾಗಬೇಕು, ಬೇರೆ ರಾಜ್ಯದ ಕ್ರೀಡಾಪಟುಗಳು ಈಗಾಗಲೇ ಉದ್ಯೋಗವನ್ನು ಪಡೆದಿರುತ್ತಾರೆ ನಮಗೂ ಉದ್ಯೋಗವನ್ನು ಕಲ್ಪಿಸಿ, ಸೈಕ್ಲಿಂಗ್ ಸ್ಟೇಡಿಯಂನ್ನು ತೆರೆಯಬೇಕು ಹಾಗೂ ಕಾಂಪಿಟೇಶನ್ ಗೆ ಬೇಕಾಗುವ ಸೈಕಲ್ ಗಳನ್ನು ಕೊಡಿಸಬೇಕು.

ವಿಶೇಷ ತರಬೇತುದಾರರನ್ನು ನಿಯೋಜಿಸಿ ತರಬೇತಿ, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳನ್ನು ಏರ್ಪಡಿಸಿ ಯುವ ಕ್ರೀಡಾಪಟುಗಳನ್ನು ಆಕರ್ಷಿಸಬೇಕು ಎಂಬ ಆಶಯ ವ್ಯಕ್ತಪಡಿಸಿದ್ದಾರೆ. ಪೋಷಕರೇ ದಯಮಾಡಿ ತಮ್ಮ ಮಕ್ಕಳಿಗೆ ಕೇವಲ ಓದಿನ ಕಡೆಗೆ ಆಸಕ್ತಿ ವಹಿಸುವಂತೆ ಮಾಡದೆ ಕ್ರೀಡೆಯಲ್ಲಿ ತೊಡಗುವಂತೆ ಪ್ರೇರೇಪಿಸಿ ಎಂಬುದಾಗಿ ಕೋರಿಕೊಳ್ಳುತ್ತಾರೆ. ಕಡಿಮೆ ಅವಧಿಯಲ್ಲಿ ಸಾಧನೆ ಮಾಡಲು ಸಾಧ್ಯವಿಲ್ಲ ಸಮಸ್ಯೆಗಳು ಜೀವನದಲ್ಲಿ ಇದ್ದೇ ಇರುತ್ತವೆ. ತಾಳ್ಮೆ,ಪ್ರಯತ್ನ ,ಛಲ ಬಿಡದೆ ಪ್ರಾಕ್ಟೀಸ್ ಮಾಡಿ ಗುರಿ ಮುಟ್ಟಬಹುದು ಎಂದು ಯುವ ಕ್ರೀಡಾಪಟುಗಳಿಗೆ ಸಲಹೆ ನೀಡುತ್ತಾರೆ. ಮುಂಬರಲಿರುವ ಏಶಿಯನ್ ಕ್ರೀಡಾಕೂಟ ಹಾಗೂ 2028ರ ಒಲಂಪಿಕ್ ಟೀಮ್ ನಲ್ಲಿ ಇದ್ದೇ ಇರುತ್ತೇನೆ ಎಂಬ ಕಾನ್ಫಿಡೆನ್ಸ್ ನನಗಿದೆ. ನನ್ನನ್ನು ಸೇರಿದಂತೆ ಅನೇಕ ಪ್ರತಿಭಾವಂತ ಕ್ರೀಡಾಪಟುಗಳು ನಾನಾ ಸೌಲಭ್ಯಗಳನ್ನು ವಂಚಿತರಾಗಿದ್ದು, ನೆರವು ದೊರೆತರೆ ಇನ್ನಷ್ಟು ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂಬ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

## ಪ್ರತಿಜ್ಞೆ

ಬೇಸಿಗೆ ರಜೆ ಪ್ರಾರಂಭವಾಯಿತು. ಪ್ರತಿದಿನ ಮಕ್ಕಳಿಗೆ ಆಟವೇ ಆಟ. ಹೀಗೆ ಆಡುತ್ತಿರುವಾಗ ಮಕ್ಕಳು ಜಗಳ ಮಾಡಿಕೊಂಡು ಬಂದರು.

ಯಾಕೆ ಏನಾಯ್ತು ಎಂದಾಗ ಮಕ್ಕಳು ಆಟದಲ್ಲಿ ಅವನು ಮೋಸ ಮಾಡಿದ, ಗಾಡ್ ಪ್ರಾಮಿಸ್ ನಾನು ಮೋಸ ಮಾಡಿಲ್ಲ ದೇವರಾಣೆಗೂ ನಾನು ಮೋಸ ಮಾಡಿಲ್ಲ ಎಂದು, ಇಲ್ಲ ಅವನು ಮೋಸ ಮಾಡಿದ್ದಾನೆ, ದೇವರಾಣೆಗೂ ಮೋಸ ಮಾಡಿದ್ದಾನೆ ಎಂದು ಇನ್ನಷ್ಟು ಮಕ್ಕಳು, ಮದರ್ ಪ್ರಾಮಿಸ್, ಫಾದರ್ ಪ್ರಾಮಿಸ್ ಇವೆಲ್ಲ ಪ್ರಾಮಿಸ್ಗಳನ್ನ ನೋಡಿ ಕೇಳಿ ನಂಗೆ ಆಶ್ಚರ್ಯ ಆಯ್ತು ಒಂದು ಪುಟ್ಟ ಆಟದ ಸೋಲು ಗೆಲುವಿಗಾಗಿ ಮಕ್ಕಳ ಪ್ರಾಮಿಸ್ ಅಂದ್ರೆ ಮಾತುಕೊಡೋದು ಆಣೆ ಇಡೋದು ಎಷ್ಟು ಸುಲಭ ತಂದೆ ಮೇಲೆ ತಾಯಿ ಮೇಲೆ ದೇವರ ಮೇಲೆ ಮಾತುಕೊಡೋದು ಪ್ರಾಮಿಸ್ ಮಾಡೋದು ಆಣೆ ಇಡೋದು ಪ್ರತಿಜ್ಞೆಗಳನ್ನು ಮಾಡೋದು ಅಷ್ಟು ಸುಲಭನಾ!!ಇದರ ಮಹತ್ವ ಅರಿಯದ ಮಕ್ಕಳಿಗೆ ತಿಳಿಸಿ ಹೇಳಬೇಕಾಯಿತು.

ಅಷ್ಟೇ ಅಲ್ಲ ದೊಡ್ಡವರಿಗೂ ಇದು ಅನ್ವಯಿಸುತ್ತದೆ.ಇತ್ತೀಚಿನ ದಿನಗಳಲ್ಲಿ ಕೊಟ್ಟ ಮಾತುಗಳು ಗಾಳಿಗೆ ತೂರಿ ಹೋಗಿರುತ್ತವೆ, ನಾನು ಹೇಳಿಯೇ ಇಲ್ಲ ಹಾಗೆ, ಅನ್ನೋದನ್ನ ಕೇಳಿಯೆ ಇರುತ್ತೇವೆ.ಈ ಮಾತು ಅಥವಾ ಪ್ರತಿಜ್ಞೆ ಬಗ್ಗೆ ಹೇಳೊದಾದರೆ ಮಹಾಭಾರತದ ಈ ಕಥೆ ತುಂಬಾ ಮುಖ್ಯ ಅನ್ನಿಸುತ್ತೆ, ಎಲ್ಲರಿಗೂ ಗೊತ್ತಿರುತ್ತೆ.ಆದರೂ ಒಮ್ಮೆ ತಿಳಿದುಕೊಳ್ಳೋಣ ಶಂತನು ತನ್ನ ಮಗ ದೇವವ್ರತನಿಗೆ ಯುವರಾಜ ಎಂದು ಘೋಷಣೆ ಮಾಡಿ ಹೆಚ್ಚಿನ ಸಮಯ ಕಾಡಿನಲ್ಲಿ ಕಳಿತಾ ಇದ್ದ.ಒಮ್ಮೆ ಕಾಡಲಿ ಹೀಗೆ ಓಡಾಡುತ್ತಾ ಇದ್ದಾಗ ಗಾಳಿ ಮುಖಾಂತರ ಒಂದು ಸುವಾಸನೆ ಬರ್ತಾ ಇತ್ತು ಹಾಗೆ ಅದನ್ನ ಅವನು ಅರಸಿಕೊಂಡು ಹೋಗುತ್ತಾನೆ.

ಆಗ ಅಲ್ಲೊಬ್ಬ ಬೆಸ್ತರಕನ್ಯೆ ನಿಂತಿರ್ತಾಳೆ, ಅವಳನ್ನು ನೋಡಿ ಮೋಹಿತನಾದ ಶಂತನು ನನ್ನ ಮದುವೆ ಆಗ್ತೀಯಾ ಅಂತ ಕೇಳಿದಾಗ ಅವಳು ನನ್ನ ತಂದೆಯನ್ನ ಕೇಳಿ ಎನ್ನುವಳು,ಇವಳನ್ನ ಸುಗಂಧಿನಿ,ಸತ್ಯವತಿ ಎಂದು ಕರೆಯಲಾಗುತ್ತದೆ.ಆಗ ಶಂತನು ಅವಳ ತಂದೆಯಾದ ದಾಶರಾಜನ ಬಳಿ ಹೋಗಿ ಕೇಳಲು ದಾಶರಾಜನು ಮುಂದೆ ನನ್ನ ಮಗಳ ಮಕ್ಕಳಿಗೆ ನೀನು ರಾಜ್ಯವನ್ನು ಕೊಡೋಕೆ ಸಾಧ್ಯನಾ ಅವರಿಗೆ ಸಿಂಹಾಸನ ಸಿಗೋಕೆ ಸಾಧ್ಯ ಆಗುತ್ತಾ , ನೀನೇನಾದರೂ ನನ್ನ ಮಗಳ ಮಕ್ಕಳಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡ್ತೀನಿ ಅಂದ್ರೆ ಖಂಡಿತ ನನ್ನ ಮಗಳನ್ನು ನಿನಗೆ ಕೊಡ್ತೀನಿ ಅಂತ ಹೇಳಿದಾಗ ಅವನು ತುಂಬಾ ಬೇಸರದಿಂದ ಅಲ್ಲಿಂದ ಹೊರಡುತ್ತಾನೆ.

ಯಾಕೆಂದರೆ ಅವನಿಗೆ ಇರತಕ್ಕಂತಹ ಮುದ್ದಾದ ಮಗ ದೇವವ್ರತ ತುಂಬಾ ಬಲಿಷ್ಠವಾಗಿರುತ್ತಾನೆ. ಅವನು ಮುಂದೆ ಎಂತಹ ಶತ್ರುಗಳು ಗಡಗಡ ನಡುಗುವಷ್ಟು ಬಲಿಷ್ಠನಾಗಿರುತ್ತಾನೆ.ಇವನನ್ನು ಬಿಟ್ಟು ಬೇರೆ ಮಕ್ಕಳಿಗೆ ತಾನು ಅಧಿಕಾರವನ್ನು ಕೊಡಬೇಕಾ ಎಂಬ ಯೋಚನೆ ಮಾಡುತ್ತಾ ಚಿಂತಾಮಗ್ನನಾಗಿ ಮನೆ ಸೇರುತ್ತಾನೆ.ಶಂತನನ್ನ ನೋಡಿ ಮಗನು ಕಾರಣ ಕೇಳಿದಾಗ ಅವನು ಸರಿಯಾದ ಕಾರಣವನ್ನು ಕೊಡೋದಿಲ್ಲ ಆಗ ಮಂತ್ರಿಯನ್ನು ವಿಚಾರಿಸಿದಾಗ ನಿಜವಾದ ವಿಷಯ ಗೊತ್ತಾಗುತ್ತೆ. ಆಗ ದೇವವ್ರತ ದಾಶರಾಜನ ಹತ್ತಿರ ಹೋಗಿ ನಿನ್ನ ಮಗಳು ಸತ್ಯವತಿಯನ್ನು ನನ್ನ ತಂದೆಗೆ ಕೊಟ್ಟು ಮದುವೆ ಮಾಡಿಕೊಡು ಎಂದು ಕೇಳುತ್ತಾನೆ.

ಆಗ ದಾಶರಾಜ ನಿನ್ನಂತಹ ಒಬ್ಬ ಬಲಿಷ್ಠ ಯುವರಾಜ ಇದ್ದಾಗ ನನ್ನ ಮಗಳ ಮಕ್ಕಳಿಗೆ ಹೇಗೆ ಸಿಂಹಾಸನ ಸಿಗಲು ಸಾಧ್ಯ, ನೀನು ಸಿಂಹಾಸನವನ್ನ ಬಿಟ್ಟುಕೊಡೋದಾದ್ರೆ ನಾನು ಖಂಡಿತ ನನ್ನ ಮಗಳನ್ನು ನಿನ್ನಪ್ಪನಿಗೆ ಕೊಟ್ಟು ಮದುವೆ ಮಾಡ್ತೀನಿ ಅಂತ ಹೇಳಿದಾಗ, ನಾನು ಯಾವುದೇ ಕಾರಣಕ್ಕೂ ಸಿಂಹಾಸನದ ಆಸೆ ಪಡೋದಿಲ್ಲ ನಾನು ಸತ್ಯವತಿ ಅಮ್ಮನಿಗೆ ಹುಟ್ಟುವ ಮಕ್ಕಳಿಗೆ ಸಿಂಹಾಸವನ್ನು ಕೊಡುತ್ತೇನೆ ಅಂತ ಹೇಳಿದಾಗ, ಹೌದು ನೀನೇನು ಸಿಂಹಾಸವನ್ನು ಬಿಡ್ತೀಯ ಆದ್ರೆ ಮುಂದೆ ನಿನಗೆ ಹುಟ್ಟುವ ಮಕ್ಕಳು ಸುಮ್ಮನಿರಲು ಸಾಧ್ಯವೆ, ಸಿಂಹಾಸನಕ್ಕಾಗಿ ಜಗಳ ಆಡದೆ ಇರುವರೆ ಅಂತ ಕೇಳಿದಾಗ ,ದೇವವ್ರತ ಆಗ ಒಂದು ಪ್ರತಿಜ್ಞೆಯನ್ನು ಕೈಗೊಳ್ಳುತ್ತಾನೆ.



ನಾನು ಯಾವುದೇ ಕಾರಣಕ್ಕೂ ಸತ್ಯ ವತಿಗೆ ಆಗ್ಲೇ ನನ್ನ ತಂದೆಗೆ ಆಗಲಿ ನಾನು ಮೋಸ ಮಾಡುವುದಿಲ್ಲ ನಾನು ಯಾವುದೇ ಕಾರಣಕ್ಕೂ ರಾಜನಾಗಬೇಕೆಂಬ ಆಸೆಯು ಇಲ್ಲ

ಹಾಗೇನೆ ನಾನು ಮದುವೆಯನ್ನು ಆಗುವುದಿಲ್ಲ. ಸಂಪೂರ್ಣವಾಗಿ ಈ ಚಂದ್ರ ವಂಶವನ್ನ ನಾನು ಮುಂದುವರೆಸಿಕೊಂಡು ಹೋಗೋದಕ್ಕೆ ಎಲ್ಲಾರೀತಿಯಿಂದ ಪ್ರೋತ್ಸಾಹ ನೀಡುತ್ತೇನೆ ಅಂತ ಹೇಳಿ ಪ್ರತಿಜ್ಞೆ ಮಾಡುತ್ತಾನೆ. ಈ ಪ್ರತಿಜ್ಞೆ ಭೀಷ್ಮ ಪ್ರತಿಜ್ಞೆ ಎಂದು ಪ್ರಸಿದ್ಧಿ ಆಗುತ್ತೆ. ಅಂದಿನಿಂದ ದೇವವ್ರತ ಭೀಷ್ಮ ಎಂದು ಪ್ರಖ್ಯಾತಿ ಹೊಂದುವನು. ಈಗ ಇಂತಹ ಪ್ರತಿಜ್ಞೆ ಕೈಗೊಳ್ಳುವಂತವರು ಯಾರನ್ನು ಕಾಣಲು ಸಾಧ್ಯವಿಲ್ಲ. ಯಾಕೆಂದರೆ ಇವಾಗ ಕೊಟ್ಟಿರೋ ಮಾತನ್ನು ಮುಂದಿನ ಕ್ಷಣಕ್ಕೆ ಮುರಿಯುವಂತ ಜನರನ್ನ ಕಾಣುತ್ತೇವೆ.ಹಾಗಾಗಿ ಇಂದಿನ ಪೀಳಿಗೆಗೆ ಪ್ರಾಮಿಸ್ ಅಥವಾ ಪ್ರತಿಜ್ಞೆ, ಮಾತು ಕೊಡುವುದರ ಮಹತ್ವ ತಿಳಿಸಿ ಕೊಡಬೇಕಿದೆ.ಪ್ರತಿಜ್ಞೆ ಮಾಡುವ ಮುನ್ನ ತುಂಬಾ ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು.

– ರೇಖಾ ಕನ್ನಡತಿ

# ರೂ.1.30ಲಕ್ಷ ನಗದು ಹಣ ಜಪ್ತಿ: ಡಿಸಿ

■ ಹಂಪಿ ಟೈಮ್ಸ್ ಬಳ್ಳಾರಿ



ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಅನಧೀಕೃತವಾಗಿ ಸಾಗಿಸುತ್ತಿದ್ದ ರೂ.1,30,380 ನಗದು ಹಣವನ್ನು 93–ಬಳ್ಳಾರಿ ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ವೈ.ಬೂದಿಹಾಳ್ ಚೆಕ್ ಪೋಸ್ಟ್ ಬಳಿ ಫ್ಲೈಯಿಂಗ್ ಸ್ಕ್ವಾಡ್ ತಂಡ ಜಪ್ತಿ ಮಾಡಲಾಗಿದೆ ಮತ್ತು ಪ್ರಕರಣ ದಾಖಲು ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ಚುನಾವಣೆಯ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಈಗಾಗಲೇ ವಿವಿಧ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಕಾರ್ಯಪ್ರವೃತ್ತವಾಗಿದೆ. 16 ಫ್ಲೈಯಿಂಗ್ ಸ್ಕ್ವಾಡ್, 24 ಎಸ್‌ಎಸ್‌ಟಿ ತಂಡ ಮತ್ತು 7 ಅಬಕಾರಿ ತಂಡ ಕಾರ್ಯ ನಿರ್ವಹಿಸುತ್ತಿವೆ. ಈವರೆಗೆ ಒಟ್ಟು 45 ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

# ಚೆಕ್‌ಪೋಸ್ಟ್‌ಗೆ ತಾಪಂ ಇಒ ಭೇಟಿ

■ ಹಂಪಿ ಟೈಮ್ಸ್ ಹೊಸಪೇಟೆ




ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆ ಚೆಕ್‌ಪೋಸ್ಟಗಳನ್ನು ಸ್ಥಾಪಿಸಿ ಅಕ್ರಮಗಳ ಮೇಲೆ ನಿಗಾ ವಹಿಸಲಾಗಿದೆ.

ಹಡಗಲಿಯ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಜಯರಾಮ ಎಂ.ಚವ್ಹಾಣ್ ಅವರು ಮಾರ್ಚ 24ರಂದು ಮೈಲಾರ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದರು. ಲೋಕಸಭಾ ಚುನಾವಣೆಯು ನ್ಯಾಯಸಮ್ಮತ ಹಾಗೂ ಮುಕ್ತವಾಗಿ ನಡೆಯುವ ನಿಟ್ಟಿನಲ್ಲಿ ಚುನಾವಣಾ ಅಕ್ರಮಗಳು ನಡೆಯದಂತೆ ಚೆಕ್‌ಪೋಸ್ಟನಲ್ಲಿ ಕಟ್ಟೆಚ್ಚರ ವಹಿಸಬೇಕು. ಪ್ರತಿಯೊಂದು ವಾಹನವನ್ನು ತಪಾಸಣೆಗೊಳಪಡಿಸಬೇಕು ಎಂದು ಅಲ್ಲಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಇಒ ಅವರು ಸೂಚನೆ ನೀಡಿದರು.

# ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಾಯ್ಯ) ಜಯಂತಿ ಆಚರಣೆ

■ ಹಂಪಿ ಟೈಮಸ್ ಬಳ್ಳಾರಿ


ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ(ಕೈವಾರ ತಾತಾಯ್ಯ) ಜಯಂತಿಯನ್ನು ಸೋಮವಾರ ಸರಳವಾಗಿ ಆಚರಿಸಲಾಯಿತು.

ಲೋಕಸಭೆ ಸಾರ್ವತ್ರಿಕ ಚುನಾವಣೆ–2024ರ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಂಗಿರಣ ಭವನದಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ(ಕೈವಾರ ತಾತಾಯ್ಯ) ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ ಗುರುರಾಜ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಮತ್ತು ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಕವಿ ಮನಸು

### ಸಂಯಮವಿರಲಿ



ಕರಿಮಣಿಯ ಮಾಲಿಕನು ನೀನಲ್ಲ
ಎನ್ನದಿರು
ಇರಬಹುದು ನಮ್ಮೊಳಗೆ ಕಲಹ ನೂರು
ಪ್ರೇಮದಲಿ ಕಲಹಗಳು ಅತಿ ಸಹಜ
ಎನ್ನುವರು
ಸಂಯಮವು ಬೇಕೀಗ ಒಂದು ಚೂರು

ಸಂಸಾರ ಎಂದಾಗ ಮಾತೊಂದು
ಬರಬಹುದು
ಅದನೊಂದು ವಿಪರೀತ ಎಣಿಸಬಹುದೆ?
ಅನುರಾಗ ತುಂಬಿರಲು ಒಂದಿಷ್ಟು
ಜೊತೆಯಲ್ಲಿ
ಕಳೆದಾಗ ಮುನಿಸೆಲ್ಲ ಮರೆಯದಿಹುದೆ

ನಿನಗಾಗಿ ನಾನೆಂದು ನನಗಾಗಿ ನೀನೆಂದು
ನೀನುಡಿದ ಮಾತುಗಳು ಮರೆತು ಹೋಯ್ತೆ
ಸತಿ ಪತಿಯ ಬಂಧವದು ಬೆಸೆಯುವುದು
ಸಗ್ಗದಲಿ
ಒಂದಾಗಿ ಬರೆಯೋಣ ಬಾಳ ಕವಿತೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಪ್ರೇಮ ಪತ್ರ



ಬರೆಯುವೆಯಾ ಚೆಲುವೆ ನೀನು
ನಲ್ಲನಿಗೊಂದು ಪ್ರೇಮ ಪತ್ರವನ್ನು
ತುಂಬುತಾ ಅದರಲ್ಲಿ ಪದಗಳ ಜೇನು
ಎಲ್ಲೇ ಇರಲಿ ಹುಡುಕಿ ಬರುವ ನಿನ್ನನು

ಹುಡುಕುತಿರುವೆಯಾ ಪ್ರೇಮಪದಗಳನ್ನು
ಮನದಲಿ ಹೊಳೆಯುತಿಲ್ಲವೇನು
ನಿನ್ನ ಮುಗುಳುನಗೆ ಅವಗೆ ಕಾಣಬೇಕೇನು
ನಗುವ ಮೊಗವನಿಟ್ಟು ಬರೆ ಒಲೆಯನ್ನು

ಪತ್ರದ ಒಂದೊಂದು ಅಕ್ಷರಗಳಲಿ
ಒಲವಿನ ಜೇನ ತುಂಬಿ ತುಳುಕುತಿರಲಿ
ಅಕ್ಷರಗಳಲಿಟ್ಟ ಸಿಹಿಜೇನ ಕಂಪು
ಇನಿಯನ ಮನವಾಗಲಿ ಸವಿದು ತಂಪು

ಪತ್ರದಲಿ ಬರೆದ ತಪ್ಪುಗಳ ಅಳಿಸಬೇಡ
ಕಾಣಿಸಲಿ ಅವನಿಗೆ ನಿನ್ನ ಮನದ ದುಗುಡ
ಕಳಿಸುವೆಯಾ ಪತ್ರವ ಗಿಣಿರಾಮನೊಂದಿಗೆ
ಕೊಟ್ಟೀತು ಜೋಕೆ ನಿನ್ನವನ ಬಿಟ್ಟು ಶ್ರೀ
ರಾಮನಿಗೆ

– ಕೆ ಎಂ ಬಸವರಾಜ ಹೊಸಪೇಟೆ

# ಕಥೆ ಓದೋಣ ಬನ್ನಿ



ಮುಂದುವರೆದ ಭಾಗ

**ದೊಸ್ತಾ.....** ಮತ್ತೆ ಊರಿಗೆ ಬೆಂಕಿ ಬಿಳೋದು ಕನ್ರ?ಮ ಆತು ನೋಡು! ಕೊಡು ಚೀಲಾನ ಅಂದವನೆ, ನನ್ನ ಕೈಯಲ್ಲಿದ್ದ ಬ್ಯಾಗನ್ನು ಹೆಗಲಿಗೆ ಹಾಕಿದ ಭದ್ರಿ, ತನ್ನ ಬೈಕಿನ ಕಡೆಗೆ ಕರೆದೊಯ್ಯುತ್ತ, ಒಂದು ರ?ಷದಿಂದ ಊರು ಸ್ವಲ್ಪ ಶಾಂತಿ ಐತಿ, ಇನ್ನು ನೀನು ಬಂದಿಯಲ್ಲ ಆಯ್ತು ಬಿಡು. ಏನು ಮಾಡ್ತಿ ನೋಡ್ಪ, ಊರ ಜಾತ್ರಿ ಮಾಡ್ತಿಯೊ, ಇಲ್ಲ ಊರ ತುಂಬಾ ಬೆಂಕಿ ಹಚ್ಚಿತಿಯೋ...!

ಅಲ್ಲಲ್ಲೇ ಭದ್ರಿ ನೀನಾ ಹಿಂಗಂದ್ರ ನಾನೇನು ಮಾತಡ್ಲಿ? ನಿನಗ ಗೊತ್ತಿಲ್ಲದ್ದು ಏನೈತಿ? ಅದು ಇರಲಿ ಇವಳೇಕೊ ಕೊಬ್ಬಿಕೊಂಡಳಾ ಅನಿಸುತಿಲ್ವ? ಏನಾಗೈತಿ ಇವಳಿಗೆ ಯಾಣ ಕ್ಕ ಹೋಗೊ ಕ್ರಾಸ್ ನಿಂದ ಹತ್ತಿದಳಲ್ಲ? ಮದ್ವಿ ಗಿದ್ವಿ ಏನಾರ? ಅಲ್ಲಾ ಎಲ್ಲಿಯ ಹಡಗಲಿ! ಎಲ್ಲಿಯ ಮಲೆನಾಡು? ಅವಳ್ಯಾಕ ಅಲ್ಲಿಂದ...! ಏ ಯಪ್ಪ ಉಸಿರಾಡಲಿಕ್ಕಾದರೂ ಬಿಡೊ ಸತ್ತುಗಿತ್ತು ಹೋದಿಯಾ.

ಬೈಕು ನಮ್ಮೂರ ಕಡೆಗೆ ಹೊರಟಿತು, ಮುದೇನೂರ ಕೆರೆಯ ದಿಬ್ಬದ ಮೇಲೆ ಬೈಕ್ ನಿಲ್ಲಿಸಿದ ಭದ್ರಿಯ ಕಣ್ಣುಗಳು ಒದ್ದೆ ಆಗಿದ್ದವು! ಯಾಕ್ಲೆ ಏನಾತು? ಯಾಕ ಅಳುತಿದ್ದೀಯ? ಏನಾದರೂ ಮನೆಯಲ್ಲಿ ಪ್ರಾಬ್ಲಂ? ಎಂದಿದ್ದಕ್ಕೆ, ಇಲ್ಲಾ ಗೆಳೆಯ ನೀನು ಮನಸ್ಸನ್ನು ಗಟ್ಟಿ ಮಾಡಿಕೊಂಡು ಕೇಳ್ತೀನಿ ಅಂದರೆ ನಾ ಹೇಳ್ತೀನಿ! ಸರಿ ಎನ್ನುವುದೇ ತಡ, "ನೀನು ಆಗ ಬಸ್ಸು ಇಳಿದ ತಕ್ಷಣ ಕೇಳಿದೆಯಲ್ಲ, ಇವಳೇಕೊ ಕೊಬ್ಬಿಕೊಂಡಳಾ ಎಂದು, ಅದು ತಪ್ಪಾಯ್ತು ನೋಡು ಏಕಂದರ ನಿನ್ನ ಮೇಲೆ ಜೀವನಾ ಇಟ್ಟುಕೊಂಡಿದ್ದ ಪರಿ, ನಮ್ಮ ಎಸ್ ಎಸ್ ಎಲ್ ಸಿ ರಿಸೆಲ್ಟ್ ಬರುತ್ತಲೆ ನಾವೆಲ್ಲಾ ಪಾಸು– ಫೇಲು ಎಂದೆಲ್ಲಾ ಕಾಲೇಜುಗಳನ್ನು ಹುಡುಕುತಿದ್ದೆವಲ್ಲ, ಆವಾಗಲೆ ಊರಲ್ಲಿ ಒಂದು ನೆಡೆಯಬಾರದ ಅವಗಡ ನೆಡೆದುಬಿಟ್ಟಿತ್ತು!

ನಿನಗೆ ಅದು ಗೊತ್ತಾಗಲಿಲ್ಲ ಅನ್ನುವುದಕ್ಕಿಂತ, ಗೊತ್ತಾಗಲು ನಿಮ್ಮ ಅಣ್ಣಂದಿರು ಬಿಡಲಿಲ್ಲ! ಗೊತ್ತಾದರೆ ನೀನು ಮತ್ತು ನಿನ್ನ ಭವಿಷ್ಯ ಹಾಳಾಗಿಬಿಡುತ್ತದೆ ಎನ್ನುವ ಕಾಳಜಿ ಅವರಿಗೆ ಹಾಗೆ ನನಗೂ ಕೂಡ ಅದೇ ಸರಿ ಅನ್ನಿಸಿತ್ತು ಆ ಸಮಯಕ್ಕೆ!

ನಮ್ಮೆಲ್ಲರ ರಿಸೆಲ್ಟ್ ಪಾಸಾಗಿತ್ತು, ಆದರೆ....? ಮತ್ತೇನಾಯ್ತು? ಪರಿಮಳ ಮಾತ್ರ ಗಣಿತದಲ್ಲಿ ಒಂದು ಮರ?ಕನಿಂದ ಫೇಲ್ ಆಗಿದ್ದಳು! ಆ ದಿವಸ ಅವಳಿಗೆ ರೀ ವೆಲ್ಯುವೇಷನ್ ಗೆ ಹಾಕು ಸರಿಹೋಗುತ್ತದೆ ಎಂದು ಹೇಳಿದ್ದೆವಲ್ಲ.

ಹಾಂ..... ರೀ ವೆಲ್ಯುವೇಷನ್ ಗೆ ಹಾಕಿದ್ದಳು, ಇನ್ನೂ ಏಳು ಮರ?ಕ್ಸ್ ಹೆಚ್ಚಿಗೆ ಬಂದು ಪಾಸಾಗಿದ್ದಳು...! ಒಳ್ಳೆಯದೆ ಆಯ್ತಲ್ಲೊ. ಆದರೆ ಪರಿಯ ಅಪ್ಪ ಇವುಳು ಎಷ್ಟು ಓದಿದರೇನು, ಇವಳಿಗೇಕೆ ಹೆಚ್ಚಿನ ಓದು...! ಎಂದು ಅವಳ ರಿಸೆಲ್ಟ್ ಬರುವ ಮೊದಲೇ ಅವಳ ಸೋದರ ಮಾವನಿಗೆ ಮದುವೆಯ ನಿಶ್ಚಯ ಮಾಡಿಬಿಟ್ಟರು...! ಇವಳು... ಇವಳು ಒಪ್ಪಿರಿಲಿಕ್ಕಿಲ್ಲ ಬಿಡು.... . ಹೌದು ಅವಳಿಗೆ ಇದು ಇಷ್ಟ ಇಲ್ಲದ್ದಕೇನೊ ಪರಿ ಒಂದು ದಿನವೂ ಮನೆಯಿಂದ ಆಚೆ ಬರಲಿಲ್ಲ. ಈಗಲೂ ಅವಳ ಪಾಲಿಗೆ ಉಳಿದಿರೊದೊ ಅಂದರೆ ಈ ಮನೆ ಮತ್ತು ಅದೇ ಆಸ್ಪತ್ರೆ ಗಾಳಿ ಮೈಯಾಗ ಹೊಕ್ಕವರನ್ನು ತೋರಿಸಲಿಕ್ಕೆ ಅಲ್ಲೆಲ್ಲೊ ಘಟ್ಟದ ಕೆಳಗೆ ಸೊಪ್ಪು ಮಂತರಿಸಿ ಕೊಡ್ತಾರಂತ, ಇಷ್ಟೆ ಅವಳ ಜಗತ್ತು.

ತೂ... ನಿನ್ನ ಇಷ್ಟೆಲ್ಲ ಆದರೂ... ನನಗೆ ಒಂದು ಮಾತು ಹೇಳಬಾರದ? ಯಾರ ಮಾತು ಅಂತ ನಾನು ಕೇಳಬೇಕು? ನೀನು ಕುಮಾಟಕ್ಕೆ ಹೋದ ಒಂದೇ ವಾರದಲ್ಲಿ ಅವಳ ಮಧುವೆಯ ನಿಶ್ಚಯವಾಯಿತಲ್ಲ, ಆ ರಾತ್ರಿಯೇ ಪರಿ ನಮ್ಮ ಮನೆಯ ಹಿತ್ತಲಿನಲ್ಲಿ ಬಂದು, ಇಲ್ಲಿ ನೆಡೆದಿರೊ ಒಂದು ವಿಷಯವೂ ಜಗ್ಗಿಗೆ ಗೊತ್ತಾಗಬಾರದು, ಅವನು ಓದಲೇ ಬೇಕು, ನನಗೆ ನಂಬಿಕೆ ಇದೆ ಇಂದಲ್ಲ ನಾಳೆ ಅವನು ನನ್ನ ಬಳಿ ಬಂದೇ ಬರುತ್ತಾನೆ ಆಗ ಎಲ್ಲಾ ಸರಿಹೋಗುತ್ತೆ. ನನಗೆ ಮಾತು ಕೊಡು... ಮಾತು ತಪ್ಪಿದರೆ ನನ್ನ ಹೆಣ ನೋಡಬೇಕಾಗುತ್ತೆ..! ಅಷ್ಟೆ ಗೆಳೆಯ, ಅಷ್ಟು ಹೇಳಿ ನನ್ನ ಬಾಯಿ ಕಟ್ಟಿಹೋದಳು.

ಬಿಕ್ಕಳಿಸುತಿದ್ದ ಭದ್ರಿಯ ಕೈಹಿಡಿದು, ಹಾಗಾದರೆ ಪರಿಗೆ ಹುಚ್ಚೇ...? ಹುಚ್ಚು ಹಿಡಿಯುವಂತಹದ್ದು ಏನಾಗಿತ್ತು? ಹೌದು, ಒಂದು ದಿನ ಪರಿಯ ಸೋದರ ಮಾವ, ಹೇಗಿದ್ದರೂ ಮದುವೆಯಾಗುತ್ತಿದ್ದೇವಲ್ಲ ಎನ್ನುವ ಸಲುಗೆಯಿಂದ ಪರಿಯನ್ನು ಅವರ ತೋಟದ ಗುಡಿಸಲಿನಲ್ಲಿ ಬಲವಂತವಾಗಿ ಅನುಭವಿಸಲು ಪ್ರಯತ್ನ ಪಟ್ಟನಂತೆ..! ಅಲ್ಲಿಂದ ತಪ್ಪಿಸಿಕೊಂಡು ಓಡಿ ಬಂದ ಪರಿ ತೋಟದ ಬಾವಿಗೆ ಹಾರಿಕೊಂಡಿದ್ದಾಳೆ. ಅಲ್ಲಿಯೇ ಇದ್ದ ಆಳುಕಾಳುಗಳು ಅವಳನ್ನು ಬಾವಿಯಿಂದ ತೆಗೆದು, ನೆಡೆದ ಘಟನೆಯನ್ನು ಅವರಪ್ಪನಿಗೆ ಹೇಳಿದ್ದಾರೆ, ಅಷ್ಟೇ, ಆವತ್ತಿನಿಂದ ಬೆದರಿದ ಪರಿ ಇವತ್ತಿನ ತನಕವೂ ಯಾರೊಂದಿಗೂ ಮಾತನಾಡಿಲ್ಲ, ಜನರೆಲ್ಲ ಅವಳಿಗೆ ಹುಚ್ಚು ಎನ್ನುತ್ತಿದ್ದಾರೆ.

ನಿಂತ ಗಾಡಿಗೆ ಗುದ್ದಿದ ಜಗ್ಗಿ, ನಡೆ ಊರಿಗೆ ಹೋಗೋಣ ಎನ್ನುತ್ತಾ ಬೈಕನ್ನು ತಾನೆ ಸ್ಟರ?ಟ ಮಾಡಿದ, ಬೈಕಿನ ಮೈಯಲ್ಲಿ ಗಾಳಿ ಹೊಕ್ಕಿರುವಂತೆ ಚೀರುತ್ತಾ ಊರ ಆಹುತಿಗೆ ಶರವೇಗದಲ್ಲಿ ದಾಂಡಿ ಇಟ್ಟಿತು. ಊರ ಪೌಳಿಯನ್ನು ತಲುಪುತ್ತಲೆ, ಭದ್ರಿ ನೀ ಸ್ವಲ್ಪ ಇಲ್ಲೆ ಇಳುಕೊ, ಒಂದು ಹತ್ತು ಮಿನಿಟ್ ಬಂದುಬಿಡ್ತೀನಿ ಅಂದವನೆ, ಬ್ಯಾಗನ್ನೂ ಭದ್ರಿಯ ಕೈಗಿಟ್ಟು ನೇರವಾಗಿ ಊರ ಹೊರಗಿನ ಶಾಲೆಯ ಅಂಗಳದ ಆ ತುದಿಯಲ್ಲಿರುವ ಕೆರೆಯ ಕಡೆಗೆ ಹೊರಟ.

ಪ್ರತಿನಿತ್ಯ ಬೆಳಗ್ಗೆ ಪೋಜೆಗೆಂದು ಬಿಲ್ವಪತ್ರಿ ತರಲು ಇವನು ಶಾಲೆಯ ಈ ಮೂಲೆಗೆ ಬರುತ್ತಿದ್ದ, ಅವಳೂ ಹೂವುಗಳನ್ನು ತರುವ ನೆಪ ಮಾಡಿಕೊಂಡು ಜಗ್ಗಿಯನ್ನು ಬೇಟಿಯಾಗುತಿದ್ದದ್ದು ಇಲ್ಲಿಯೇ. ಸಮಯ ಸಿಕ್ಕಾಗ, ಇಲ್ಲವೇ ಮಾಡಿಕೊಂಡು, ಸಲುಗೆ ಹೇಚ್ಚಾದಾಗ ಮುಂದಿನ ಕೆರೆಯ ದಂಡೆಯ ಆ ಮೂಲೆಯಲ್ಲಿರುವ ಕೇದಿಗೆಯ ಪೆಳಿಯೇ ಇವರಿಗೆ ಆವಾಸವಾಗುತಿತ್ತು. ಅಲ್ಲಿಂದಲೇ ಇವರ ಪವಿತ್ರ ಪ್ರೇಮದ ಕೇದಿಗೆಯ ಪರಿ'ಮಳ ಕೆರೆಯ ತುಂಬೆಲ್ಲಾ ಹಬ್ಬಿಕೊಳ್ಳುತಿತ್ತು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಕೇದಿಗೆಯ ಕೆರೆಯ ಸುತ್ತಲೂ ತಿರಿಗಿದರೂ ಪರಿ ಸಿಗಲಿಲ್ಲ, ಅವನ ಎಣಿಕೆ ಸುಳ್ಳಾಗಿತ್ತು ಅವಳು ಕಾಣಲಿಲ್ಲ, ನಿರಾಸೆಯಿಂದ ಹಿಂದಿರುಗುವಾಗ, ಆ ಬಿಲ್ವಪತ್ರಿಯ ಮರದ ಬಳಿ ಯಾರೋ ನಿಂತಿರುವುದನ್ನು ಗಮನಿಸಿದ್ದೇ ತಡ, ಬರಬರನೆ ಅಲ್ಲಿಗೆ ಹೋದರೆ! ಬಾರಪ್ಪ ರೋಮಿಯೋ ಬಾ ......, ಏನು? ನಿನ್ನ ಜೋಲಿಯಟ್ ನ ಹುಡಿಕಿಕೊಂಡು ಕೇದಿಗೆ ಪೆಳಿಯ ಹತ್ತರ ಹೋಗಿದ್ದಿ..? ಸಿಕ್ಕಳಾ..? ಅದು ಆಗಲೇ ಬಾಡಿಹೋದ ಕೇದಿಗೆ ಬಿಡು, ಅವಳ ಸೋದರ ಮಾವ ನಾನು, ಮುಡಿದು ಬಿಸಾಕ್ಕಿದ್ದೇನೆ... ಎಂದು ವಿಕೃತವಾಗಿ ನಗೆಯಾಡುತ್ತಾ, ಹಾಂ... ನನ್ನ ಮುಡಿಗೇರಿದ ಅನೇಕ ಹೂವುಗಳಲ್ಲಿ ನಿನ್ನ ಕೇದಿಗೆಯ ಪರಿ'ಮಳ... ಅದ್ಭತ ಎನ್ನುತ್ತಾನೆ. ಮೇಲಾಗಿ ನಮ್ಮ ಹಿತ್ತಲ ಬಾವಿಯಲ್ಲಿ ಈಜಾಡಲು ಅವರಪ್ಪನ ಅಣತಿಗೆ ಕಾಯಬೇಕೆ..? ಕೆರೆದಂಡಿಯ ಕೇದಿಗೆಯ ಪರಿ'ಮಳಾನ ಉಪಾಯವಾಗಿ ತೋಟದ ಮನೆಯಲ್ಲಿ ಮುಡಿದು ಅದೇ ತೋಟದ ಬಾವಿಗೆ ದಬ್ಬಿಯಾಯಿತು..! ಎನ್ನುತ್ತಾನೆ.

ಅವನ ತೆಲೆಗೆ ಬಲವಾದ ಒಂದೇ ಒಂದು ಏಟು ರಪ್.... ಎಂದಿದ್ದಷ್ಟೆ, ತಲೆಯಿಂದ ಚಿಮ್ಮಿದ ರಕ್ತ ಅವನಿಂದ ಅಣತಿ ದೂರದವರೆಗೆ ಹರಿದಿತ್ತು..! ಅವನ ಜೊತೆಯಲ್ಲಿದ್ದ ಗೆಣೆಕಾರರು ಜಗ್ಗಿ ಕೊಂದ..! ಜಗ್ಗಿ ಕೊಂದೇಬಿಟ್ಟ...! ಎಂದು ಚೀರುತ್ತಾ ಊರ ಕಡೆಗೆ ಹೋಡಿಹೋದರು. ನೆಲದ ಮೇಲೆ ಬಿದ್ದಿದ್ದ ಹೆಣದ ಮೇಲೆ ತೂ... ನಾಯಿ ಕುಲದವನೆ ಎಂದು ಉಗಿದ ಜಗ್ಗಿಯ ಮನಸ್ಸಿನಲ್ಲಿ, ತಾನು ಮಾಡಿದ ಕೃತ್ಯದ ಬಗ್ಗೆ ಸ್ವಲ್ಪವೂ ಪಾಪಪ್ರಜ್ಞೆ ಇಲ್ಲದೆ ಭಾವಶೊನ್ಯನಂತೆ ಅಲ್ಲಿಂದ ಹೊರಟು ಮನೆ ಸೇರಿಕೊಂಡ.

ಆಗಲೆ ಊರ ತುಂಬಾ ಗುಸು ಗುಸು ಪಿಸು ಪಿಸು ನೆಡೆದು, ಇದು ಕತ್ತಲ ಕೋಣೆಯಲ್ಲಿ ಕುಳಿತಿದ್ದ ಪರಿಯ ಕಿವಿಗೂ ಬಿತ್ತು! ಒಮ್ಮೆಲೆ ಚೀರಿಕೊಂಡ ಪರಿ ಕೆಳಗೆ ಬಿದ್ದಳು. ತನ್ನ ಹಣೆಯನ್ನು ಬಡಿದುಕೊಳ್ಳುತ್ತಾ ಎಂತ ಹಣೆಯಬರಹ ನನ್ನದು, ಅವನಿಗಾಗಿ ಊರವರಿಂದ, ಕೇರಿಯವರಿಂದ, ಬಂದು ಬಾಂದವರಿಂದ, ಸ್ವಂತ ಮನೆಯವರಿಂದಲೇ ಹುಚ್ಚಿ ಅನ್ನಿಸಿಕೊಂಡೆ, ಹಗಲು ರಾತ್ರಿಗಳ ಪರಿವೇ ಇಲ್ಲದೆ ಕತ್ತಲ ಕೋಣೆಯಲ್ಲಿ ನನ್ನನ್ನೂ, ನನ್ನ ಭವಿಷ್ಯವನ್ನೂ ಒಂದು ರ?ಷದಿಂದ ಕತ್ತಲಾಗಿಸಿಕೊಂಡಿದ್ದು ಈ ಸುಖ ಕಾಣಿಲಿಕ್ಕೆನಾ?.

ಇದು ಹೀಗೆ ಆಗುತ್ತದೆ ಅನ್ನೋದು ಮೊದಲೆ ತಿಳಿದಿದ್ದರೆ ಈ ನಾಟಕ ಮಾಡೊ ಅನಿವರ?ಯನೇ ಇರತಿರಲಿಲ್ಲ. ಯಾರಿಗಾಗಿ ನಾನು ಇದನ್ನೆಲ್ಲ ಸಹಿಸಿಕೊಂಡೆ..? ಯಾರ ಬರುವಿಕೆಗಾಗಿ ಇಷ್ಟೆಲ್ಲಾ ನಾನು ಕಾಯಬೇಕಾಯಿತು? ಇಂದು ಅವನೇ...... ಅವನೇ.....ಕೈತಪ್ಪಿ ಹೋದ...! ಕೊನೆಯ ಪಕ್ಷ ನಿನ್ನೆ ಬಸ್ಸಿನಲ್ಲಿ ಅವನನ್ನು ನೋಡಿದಾಗ, ಒಂದು ಮಾತು ಆಡಿದ್ದರೆ...? ನಿನ್ನ ಪರಿಗೆ ಯಾವ ಹುಚ್ಚೂ ಇಲ್ಲಾ ಎಂದು ಅವನೊಬ್ಬನಿಗೆ ಮಾತ್ರ ಗೊತ್ತಾಗಿದ್ದರೆ, ಅಯ್ಯೋ ದೇವರೆ, "ಒಂದೇ ಸೀಟಿನಲ್ಲಿದ್ದರೂ ನಮ್ಮಿಬ್ಬರ ನಡುವಿನ ಅಂತರ ಇಷ್ಟೊಂದು ದೂರವಾಯಿತೆ!" ಇದು ಎಂತಹ ವಿಧಿ ಬರಹ! ಆಯ್ಯೋ ದೇವರೆ ನನ್ನ ನಂಬಿಕೆ ಸುಳ್ಳಾಯಿತು, ದೇವರೇ ನನಗೆ ಮೋಸ ಮಾಡಿದ. ಕಲ್ಲು ದೇವರು ದೇವರೆ? ಇಲ್ಲಾ... ಎಂದು ತನ್ನ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಏನೋ ಒಂದು ತರ?ಮಾನಕ್ಕೆ ಬಂದವಳಂತೆ ತನ್ನ ಕಬ್ಬಿಣದ ಟ್ರಂಕ್ ನತ್ತ ನೋಡಿದಳು.

ಅತ್ತಾ ಜೀಪು ಕಾಣದಂತೆ ಕಣ್ಮರೆಯಾಗುತಿದ್ದಂತೆ ಇತ್ತಾ ಇಡೀ ಕೇರಿಗೆ ಕೇರಿಯೇ ಆತಂಕದಿಂದ ಮುಂದೇನೊ ಎನ್ನುತ್ತಿರುವಾಗಲೆ ಕೇರೆಯ ತುಂಬೆಲ್ಲಾ ಕೇದಿಗೆಯದ್ದೇ ವಾಸನೆ, ರಾತ್ರಿ ಯಾದಂತೆ ಇನ್ನೊಷ್ಟು ವಿಷಯ ದಟ್ಟವಾಗುತ್ತಾ, ಊರ ಜನರೆಲ್ಲರೂ ಕೆರೆಯ ದಂಡಿಯ ಮೇಲೆ ಗುಂಪು ಗುಂಪಾಗಿ ಸೇರಿ, ಎಲ್ಲರ ಬಾಯಿಯಲ್ಲೆ ಒಂದೇ ಮಾತು, ಊರ ಗೌಡರ ಮಗಳು ಕಾಣುತ್ತಿಲ್ಲವಂತೆ...! ಪರಿಮಳ ಕಾಣುತ್ತಿಲ್ಲವಂತೆ..!

ಒಮ್ಮೆಲೆ ಭದ್ರಿಯ ಎದೆ ದಸಕ್ಕು ಎಂದು ಬಡಿದುಕೊಳ್ಳಲಿಕ್ಕೆ ಪ್ರಾರಂಭವಾಯಿತು..! ನನಗೆ ನಿನ್ನೇನೆ ಗೊತ್ತಾಗಿತ್ತು, ಜಗ್ಗಿ ಬರುವಿಕೆ ಏಕೋ ಊರ ಜಾತ್ರಿ ಮಾಡಲಿಕ್ಕೆ ಅಲ್ಲಾ ಎಂದು, ಅದೇ ಆಯ್ತು ನೋಡು. ಭದ್ರಿಯೋ ಸೀದಾ ಕೆರೆಯ ದಂಡಿಯ ಮೇಲೇರಿದವನೆ ಕೆರೆಯ ಆ ದಡದಲ್ಲಿರುವ ಕೇದಿಗಿಯ ಪೆಳಿಯತ್ತಾ ಓಡಿದ, ಅವನಂದುಕೊಂಡಿದ್ದು ನಿಜವಾಗಿತ್ತು...! ಕೇದಿಗೆಯ ಗಂಟಿಯ ಮಧ್ಯದಲ್ಲಿ ಪರಿಮಳಳ ಕಳೆಬರಹ ತೇಲುತಿತ್ತು...! ಕೇದಿಗೆಯ ಕೆರೆಯ ತುಂಬೆಲ್ಲಾ ಅವಳದೇ ಪರಿ'ಮಳ............... . ಅವನು ನೀಡಿದ ಉಡುಗರೆಗಳಲ್ಲಾ ಅನಾಥವಾಗಿ ತೇಲುತಿದ್ದವು........

# ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ಡಿಸಿ, ಜಿಪಂ ಸಿಇಒ ಭೇಟಿ

■ ಹಂಪಿ ಟೈಮಸ್ ಬಳ್ಳಾರಿ

ಜಿಲ್ಲೆಯಾದ್ಯಂತ ಇಂದಿನಿಂದ (ಮಾ.25 ರಿಂದ) ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಆರಂಭಗೊಂಡಿದ್ದು, ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಜಿಲ್ಲಾಡಳಿತವು ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸಿದೆ. ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಮೊದಲನೇ ದಿನವಾದ ಸೋಮವಾರದಂದು ಕನ್ನಡ ಭಾಷಾ ಪರೀಕ್ಷೆ ದಿನದಂದು ಬಳ್ಳಾರಿ ತಾಲ್ಲೂಕಿನ ಮೋಕಾ ಗ್ರಾಮದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಭೇಟಿ ನೀಡಿ ವೀಕ್ಷಿಸಿದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ವೇಳೆ ಶಿಕ್ಷಣಾಧಿಕಾರಿಗಳು, ಮೇಲ್ವಿಚಾರಕರು ಹಾಗೂ ಇತರರು ಹಾಜರಿದ್ದರು.



# ಮೂಲಭೂತ ಸೌಕರ್ಯಗಳ ಪರಿಶೀಲನೆ ಗ್ರಾಮೀಣ ಭಾಗದಲ್ಲಿ ಸಿಇಒ ಸಂಚಾರ



■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಮಾರ್ಚ 24ರಂದು ಗ್ರಾಮೀಣ ಪ್ರದೇಶದಲ್ಲಿ ಪ್ರವಾಸ ಕೈಗೊಂಡು ವಿವಿಧೆಡೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲಿಸಿದರು.

ಮಧ್ಯಾಹ್ನ ತಂಬ್ರಹಳ್ಳಿ ಗ್ರಾಮದಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಆಕಸ್ಮಿಕವಾಗಿ ಭೇಟಿ ನೀಡಿದರು. ಅಲ್ಲಿನ ಶೌಚಾಲಯದ ಪೈಪ್‌ಲೈನ್ ಒಡೆದು ಕಲುಷಿತ ನೀರು ಹೊರಹೋಗುತ್ತಿರುವುದನ್ನು ಗಮನಿಸಿದರು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಕರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಅಲ್ಲಿನ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಇದೇ ವೇಳೆ ಸಿಇಓ ಅವರು ವಸತಿ ನಿಲಯದಲ್ಲಿನ ವಿದ್ಯಾರ್ಥಿಗಳೊಂದಿಗೆ ಕೆಲ ಹೊತ್ತು ಆಪ್ತವಾಗಿ ಮಾತನಾಡಿ ಅವರ ಓದು ವಿದ್ಯಭ್ಯಾಸದ ಬಗ್ಗೆ ಚರ್ಚಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಸರಿಯಾಗಿ ಎದುರಿಸಿರಿ ಎಂದು ವಿದ್ಯಾರ್ಥಿಗಳಿಗೆ ಸಿಇಓ ಅವರು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಪಂಚಾಯತನ ಕಾರ್ಯನಿರ್ವಾಹಕ ಅಧಿಕಾರಿ ಜಿ ಪರಮೇಶ್ವರ್ ಇದ್ದರು.

ವಿಜಯನಗರ

ಮಂಗಳವಾರ / Tuesday 26.03.2024

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಶೋಭಾಕೃತ

**26–03–2024 – ಮಂಗಳವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಹಸ್ತ |
| ಯೋಗ | : ಧೃವ |
| ಕರಣ | : ಕೌಳವ |
| ಸೂರ್ಯೋದಯ | : 06:26:02 |
| ಸೂರ್ಯಾಸ್ತ | : 18:39:08 |
| ರಾಹು | : 15:36–17:08 |
| ಯಮಘಂಡ | : 09:29–11:01 |
| ಗುಳಿಕ | : 12:33–14:04 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 25–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.64 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 844 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.321 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1590.78 ಅಡಿ |
| ಒಳ ಹರಿವು | 1635 ಕ್ಯುಸೆಕ್ |
| ಹೊರ ಹರಿವು | 8653 ಕ್ಯುಸೆಕ್ |
| ಸಾಮರ್ಥ್ಯ | 11.697 ಟಿಎಂಸಿ |

# ವೈಚಾರಿಕ ಪ್ರಜ್ಞಾವಂತಿಕೆ ಬೆಳೆಸಿಕೊಳ್ಳಿ

## ಪೀಠಾಧಿಪತಿ ಶಾಂತಭೀಷ್ಮ ಚೌಡಯ್ಯ ಮಹಸ್ವಾಮಿ ಹೇಳಿಕೆ । ಪ್ರತಿಭಾಪುರಸ್ಕಾರ, ಸಾಧಕರಿಗೆ ಸನ್ಮಾನ ಸಮಾರಂಭ

**ಹಂಪಿ ಟೈಮ್ಸ್ ಹರಪನಹಳ್ಳಿ**

ಹೆಣ್ಣುದೇವರ ಹೆಸರಲ್ಲಿ ಮಾಂಸ ಮದ್ಯದಲ್ಲೇ ಮುಳುಗೆದ್ದಿದ್ದೀರಿ ಇನ್ನಾದರು ಪರಿಶುದ್ಧ ಸಂಸ್ಕಾರದಿಂದ ಒಂದೇ ದೇವರು ಒಬ್ಬನೇ ಗುರುವನ್ನು ನಂಬಿ ಬದುಕು ಹಸನಾಗಿಸಿಕೊಳ್ಳಿ ಎಂದು ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಪೀಠಾಧಿಪತಿ ಶಾಂತಭೀಷ್ಮ ಚೌಡಯ್ಯ ಮಹಸ್ವಾಮಿಗಳು ಹೇಳಿದರು.

ತಾಲೂಕಿನ ಗರ್ಭಗುಡಿ ಗ್ರಾಮದ ತುಂಗಾಭದ್ರನದಿ ತಟದಲ್ಲಿನ ತಿಮ್ಮಪ್ಪ ದೇವಾಲಯದ ಸಭಾಭವನದಲ್ಲಿ ತಾಲೂಕು ಗಂಗಾಮತ ಸಮಾಜ, ತಾಲೂಕು ಗಂಗಾಮತ ನೌಕರರ ಸಂಘ ಹಾಗೂ ಮೀನುಗಾರರ ಸಹಕಾರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ತಾಲೂಕು ಗಂಗಾಮತ ಸಮಾಜದ ಸಾಮಾನ್ಯ ಸಭೆ ಮತ್ತು ಪ್ರತಿಭಾಪುರಸ್ಕಾರ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಹೃದಯ ಶ್ರೀಮಂತಿಕೆಗೆ ಬರವಿಲ್ಲದ ಸಮಾಜ, ಪರಿಶುದ್ಧ ಸಂಸ್ಕಾರದಿಂದ ಮಾತ್ರ ಬದಲಾವಣೆ ಸಾದ್ಯ. ಕಾಯಕ ನಿಷ್ಟ ಸಮಾಜ ಎಂದು ಹೆಸರಾಗಿರುವ ಗಂಗಾಮತಸಮಾಜರಾಜಕೀಯವಾಗಿಮೇಲೇರಬೇಕಿದೆ ಅದಕ್ಕಾಗಿ ನೂರು ದೇವರಿಗೆ ಹಣೆಹಚ್ಚಿ ಬಾಡೂಟದ




ನೆಪದಲ್ಲಿ ನೀವು ದುಶ್ಚಟಗಳಿಗೆ ಬಲಿಯಾಗದೆ ನಿಮ್ಮ ಮಕ್ಕಳಿಗೆ ಸಂಸ್ಕೃತಿ ಸಂಸ್ಕಾರ ಕಲಿಸುವ ನಿಟ್ಟಿನಲ್ಲಿ ಆಲೋಚನೆಗೆ ಮುಂದಾಗಬೇಕಿದೆ ಎಂದರು.

ಸಮಾಜದ ಅಭಿವೃದ್ದಿಯ ಸಂಕೇತ ಕಾರ್ಯಕ್ರಮಗಳು, ಸಮಾಜಮುಖಿಯಾಗಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಂಘಟನೆ ಭಲಾಡ್ಯಗೊಳಿಸಬೇಕು. ಮುಂದಿನ ದಿನಗಳಲ್ಲಿ ಗಂಗಾದೇವಿ, ಅಂಬಿಗರ ಚೌಡಯ್ಯನವರಿಗೆ ಜಯಕಾರ ಹಾಕುತ್ತಾ ಮಠದತ್ತ ಹೆಜ್ಜೆ ಹಾಕುವ ಪರಿಪಾಟ ಬೆಳೆಸಿಕೊಳ್ಳಿ ಎಂದರು.

ನಿವೃತ್ತ ಮೀನುಗಾರಿಕೆ ಇಲಾಖೆಯ ಜಿಲ್ಲಾ ನಿರ್ದೇಶಕ ಪವಾಡಿ ಬಸವರಾಜ್, ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ಪವಾಡಿ ಮಲ್ಲಿಕಾರ್ಜುನ್, ತಾಲೂಕು ಗಂಗಾಮತ ಸಮಾಜದ ಉಪಾಧ್ಯಕ್ಷ ಜಾಲಗಾರ ಕೊಟ್ರೇಶ್, ಪ್ರಧಾನ ಕಾರ್ಯದರ್ಶಿ ಪವಾಡಿ ದೇವೇಂದ್ರ, ಪ್ರಾಥಾಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಿ ರಾಜಶೇಖರ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಬಿ ಅಂಜಿನಪ್ಪ, ಪ್ರಾಥಾಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ತಾಲೂಕು ಅಧ್ಯಕ್ಷ ಬಿ ಚಂದ್ರಮೌಳಿ, ವೈ.ಮಹಾಂತೇಶ್, ಅರಸಿಕೆರೆ ರಾಮಣ್ಣ, ಅಣಜಿಗೆರೆ ನಿಂಗಣ್ಣ, ಶೇಖರಪ್ಪ, ನಿವೃತ್ತ ಎಂಜಿನೀಯರ್ ಕೆ.ಸಿ.ಗಂಗಾಧರ್, ನಿಟ್ಟೂರು ಗ್ರಾಪಂ ಅಧ್ಯಕ್ಷೆ ಸುಧಾ ಬಾರ್ಕಿ, ಶಿಂಗ್ರಿಹಳ್ಳಿ ಗುಡ್ಡಪ್ಪ, ಹಿರೆಮೇಗಳಗೆರೆ ವೀರಣ್ಣ, ಸೇರಿದಂತೆ ಅನೇಕ ಸಮಾಜದ ಮುಖಂಡರುಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನಸಿಸಿ ಗೌರವಿಸಲಾಯಿತು. ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಪೀಠಾಧಿಪತಿ ಶಾಂತಭೀಷ್ಮ ಚೌಡಯ್ಯ ಮಹಸ್ವಾಮಿಗಳು, ನಿವೃತ್ತ ಮೀನುಗಾರಿಕೆ ಇಲಾಖೆಯ ಜಿಲ್ಲಾ ನಿರ್ದೇಶಕ ಪವಾಡಿ ಬಸವರಾಜ್, ಪ್ರಾಥಾಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಿ ರಾಜಶೇಖರ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಬಿ ಅಂಜಿನಪ್ಪ, ಪ್ರಾಥಾಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ತಾಲೂಕು ಅಧ್ಯಕ್ಷ ಬಿ ಚಂದ್ರಮೌಳಿ,ನಿವೃತ್ತ ಎಂಜಿನೀಯರ್ ಕೆ.ಸಿ.ಗಂಗಾಧರ್ ಇತರರಿದ್ದರು.

# ಮಾ.27 ರಂದು ವಿಶ್ವ ಕ್ಷಯರೋಗ ದಿನಾಚರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರದ ವತಿಯಿಂದ ವಿಶ್ವ ಕ್ಷಯರೋಗ ದಿನಾಚರಣೆ ಅಂಗವಾಗಿ ಮಾರ್ಚ್ 27 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಾರ್ವಜನಿಕರು, ಆಸಕ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 658.58 ಲೀ. ಮದ್ಯ ಜಪ್ತಿ: ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆಯು ಕಟ್ಟುನಿಟ್ಟಾಗಿ ಜಾರಿಯಾಗಿದ್ದು, ಭಾನುವಾರ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಅನಧೀಕೃತವಾಗಿ ಸಾಗಿಸುತ್ತಿದ್ದ 658.58 ಲೀಟರ್ (ರೂ.2,57,990 ಮೌಲ್ಯ) ಮದ್ಯ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಅಬಕಾರಿ ಪೊಲೀಸ್ ಅಧಿಕಾರಿಗಳಿಂದ 520.87 ಲೀಟರ್ (ರೂ.196960 ಮೌಲ್ಯ) ಮದ್ಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳಿಂದ 137.71 ಲೀಟರ್ (ರೂ.61,030 ಮೌಲ್ಯ) ಮದ್ಯ ಮತ್ತು ಒಂದು ವಾಹನ (ರೂ.80 ಸಾವಿರ ಮೌಲ್ಯ) ವಶಪಡಿಸಿಕೊಳ್ಳಲಾಗಿದೆ. ಈವರೆಗೆ ಒಟ್ಟು 47 ಪ್ರಕರಣ ದಾಖಲಿಸಲಾಗಿದೆ.

ಜಿಲ್ಲೆಯಾದ್ಯಂತ ಚುನಾವಣೆಯ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಈಗಾಗಲೇ ವಿವಿಧ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಕಾರ್ಯಪ್ರವೃತ್ತವಾಗಿದೆ. 16 ಫ್ಲೈಯಿಂಗ್ ಸ್ಕ್ವಾಡ್, 24 ಎಸ್ಎಸ್‌ಟಿ ತಂಡ ಮತ್ತು 7 ಅಬಕಾರಿ ತಂಡ ಕಾರ್ಯ ನಿರ್ವಹಿಸುತ್ತಿವೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

# ಮೆದುಳು ಜ್ವರ ನಿಯಂತ್ರಣಕ್ಕೆ ಕೈ ಜೋಡಿಸಿ

## ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್ ಬಾಬು ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಮೆದುಳು ಜ್ವರ ಮಾರಕ ರೋಗವಾಗಿದ್ದು, ರೋಗವನ್ನು ಹರಡುವುದನ್ನು ನಿಯಂತ್ರಿಸಲು ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ವೈ ರಮೇಶ್ ಬಾಬು ತಿಳಿಸಿದರು.

ನಗರದ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬಿ.ಸಿ. ರಾಯ್ ಸಭಾಂಗಣದಲ್ಲಿ ಸೋಮವಾರದಂದು ಜಿಲ್ಲಾ ಆಸ್ಪತ್ರೆ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಘಟಕ ಇವರ ಸಂಯುಕ್ತಾಶ್ರಯದಡಿ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಖಾಸಗಿ ಆಸ್ಪತ್ರೆಗಳ ತಜ್ಞ ವೈದ್ಯರುಗಳಿಗೆ ಏರ್ಪಡಿಸಿದ ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮೆದುಳು ಜ್ವರ ವೈರಾಣುಗಳನ್ನು ಹೊಂದಿದ ಹಂದಿ, ಬೆಳ್ಳಕ್ಕಿಯನ್ನು ಕಚ್ಚಿದ ಕ್ಯೂಲೆಕ್ಸ್ ಜಾತಿಯ ಸೊಳ್ಳೆಗಳು ಮನುಷ್ಯರಿಗೆ ಕಚ್ಚುವುದರಿಂದ ಮೆದುಳು ಜ್ವರ ಹರಡುತ್ತದೆ. ಈ ರೋಗವನ್ನು ತಡೆಗಟ್ಟಲು ಎಲ್ಲರೂ ಕೈಜೊಡಿಸಬೇಕಿದೆ. ಎರಡು ದಶಕಗಳ ಹಿಂದೆ ಜಿಲ್ಲೆಯು ಅತಿ ಹೆಚ್ಚು ಮೆದುಳು ಜ್ವರ ಪ್ರಕರಣಗಳು ವರದಿಯಾಗುತ್ತಿದ್ದವು. 2007 ರಲ್ಲಿ 15 ವರ್ಷದೊಳಗಿನ ಮಕ್ಕಳಿಗೆ ಮೆದುಳು



ಜ್ವರ ನಿರೋಧಕ ಜೆಇ ಲಸಿಕೆಯನ್ನು ಅಭಿಯಾನದ ರೀತಿಯಲ್ಲಿ ನೀಡಿದ ನಂತರ ಪ್ರಸ್ತುತ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿವೆ. ಆದರೂ ಸಹ ಮುಂಜಾಗ್ರತೆ ವಹಿಸುವುದು ಅಗತ್ಯವಾಗಿದ್ದು, ಮಕ್ಕಳಲ್ಲಿ ವಿಪರೀತ ಜ್ವರ, ತಲೆನೋವು, ಕತ್ತಿನ ಬಿಗಿತ, ತಲೆ ಸುತ್ತುವಿಕೆ, ಮೈನಡುಕ ಮತ್ತು ಎಚ್ಚರ ತಪ್ಪುವುದು ಇಂತಹ ರೋಗ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣ ವೈದ್ಯರ ಬಳಿ ತಪಾಸಣೆ ಮಾಡಿಸಬೇಕು ಎಂದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳು ಹೆಚ್ಚಾಗಿ ಈ ರೋಗಕ್ಕೆ ತುತ್ತಾಗುತ್ತಿದ್ದು, ಕೆಲವರಿಗೆ ನರ ದೌರ್ಬಲ್ಯ ಮತ್ತು ಬುದ್ದಿ ಮಾಂದ್ಯತೆ ಉಂಟಾಗುತ್ತದೆ. ಪಾಲಕರು ತಮ್ಮ ಮಕ್ಕಳಿಗೆ 2 ಬಾರಿ ಅಂದರೆ 9ನೇ ಮತ್ತು 18ನೇ ತಿಂಗಳ ವಯಸ್ಸಿನಲ್ಲಿ ತಪ್ಪದೆ ಲಸಿಕೆ ಹಾಕಿಸಬೇಕು ಎಂದು ತಿಳಿಸಿದರು.

ಈ ಸಂಧರ್ಭದಲ್ಲಿ ವಿಮ್ಸ್‌ನ ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ವಿಶ್ವನಾಥ.ಬಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಹೆಚ್‌ಐವಿ, ಟಿಬಿ, ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮಗಳ ರಾಷ್ಟ್ರೀಯ ಸಲಹಾ ಸಮಿತಿಯ ಸದಸ್ಯ ಡಾ. ಕೆ.ರವಿಕುಮಾರ್, ವಿಮ್ಸ್‌ನ ಮಕ್ಕಳ ತಜ್ಞ ಡಾ. ದುರ್ಗಪ್ಪ, ಡಾ.ಕೃಷ್ಣ, ವಿಮ್ಸ್‌ನ ವಿಜ್ಞಾನಿ ಮೈಕ್ರೋಬಯಾಲಜಿ ವಿಭಾಗದ ಡಾ.ಭಾವನ, ಡಾ.ವಿಶ್ವನಾಥ್.ಹೆಚ್, ಡಾ.ಗುರುನಾಥ್.ಬಿ ಚೌವ್ಹಾಣ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್.ದಾಸಪ್ಪನವರ, ಜಿಲ್ಲಾ ಕೀಟಶಾಸ್ತ್ರಜ್ಞ ನಂದಾ ಕಡಿ, ಎನ್‌ವಿಬಿಡಿಸಿಪಿ ಸಲಹೆಗಾರ ಪ್ರತಾಪ್ ಸೇರಿದಂತೆ ತಜ್ಞ ವೈದ್ಯರು ಉಪಸ್ಥಿತರಿದ್ದರು.

# ಹೋಳಿ ಹಬ್ಬ ಅದ್ದೂರಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹೋಳಿ ಹುಣ್ಣಿಮೆಯ ಹಿನ್ನೆಲೆಯಲ್ಲಿ ಸೋಮವಾರ ಪಟ್ಟಣದಲ್ಲಿ ಹೋಳಿ ಆಚರಣೆ ಅದ್ದೂರಿಯಾಗಿಯೇ ಆಚರಿಸಲಾಯಿತು. ಮಹಿಳೆಯರು, ಯುವತಿ, ಯುವಕರು ಆಚರಣೆಯಲ್ಲಿ ಕುಣಿದು ಕುಪ್ಪಳಿಸಿದರು.

ಹುಣ್ಣಿಮೆಯ ಹಿಂದಿನದಿನ ಭಾನುವಾರ ರತಿಮನ್ಮಥರ ಗೊಂಬೆಗಳನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ, ಬೆಳಗಿನ ಜಾವ ಕಾಮಣ್ಣನ್ನು ಸುಡುವ ಸಾಂಪ್ರದಾಯಿಕ ಆಚರಣೆಯ ಬಳಿಕ ಹೋಳಿ ಆಡಲಾಯಿತು. ಅದರಂತೆ ಪಟ್ಟಣದ ಹಳೇ ಊರಿನ ನೇಕಾರ್ ಕಾಲೂನಿ, ಬಸವೇಶ್ವರ ಬಜಾರ್, ಕೆ.ವಿ.ಓ.ಆರ್. ಕಾಲೂನಿ, ಭೋವಿಕಾಲೂನಿ, ರಾಮನಗರ ಮತ್ತು ಕೂಡ್ಲಿಗಿ ವೃತ್ತದಲ್ಲಿ ಹೋಳಿ ಆಚರಣೆಯಲ್ಲಿ ಸಾರ್ವಜನಿಕರು ಪಾಲ್ಗೊಂಡಿದ್ದರು. ಯುವಕರು ಕಾರಂಜಿ ಹೋಳಿ ಎಂದು ಟ್ಯಾಂಕರ್‌ಗಳ ಮೂಲಕ ಬಣ್ಣವನ್ನು ಬೆರೆಸಿ, ಸ್ಪ್ರೇಮಾಡುವ ಮೂಲಕ, ಡಿಜೆ ಮ್ಯೂಜಿಕ್ ಹಾಕಿ, ಹಾಡುಗಳಿಗೆ ಹೆಜ್ಜೆಗಳನ್ನು ಹಾಕುತ್ತಾ ಕುಣಿದು ಕುಪ್ಪಳಿಸಿದರು. ಬೆಳಗ್ಗೆ 9ಗಂಟೆಯಿಂದ ಆರಂಭವಾದ ಹೋಳಿಯು ಮಧ್ಯಾಹ್ನ 12ಗಂಟೆಯವರೆಗೂ ಅದ್ದೂರಿಯಾಗಿಯೇ ಜರುಗಿತು. ಪೊಲೀಸ್ ಸಿಪಿಐ ಮತ್ತು ಸಿಬ್ಬಂದಿ ಹಾಗೂ ಗೃಹರಕ್ಷಕದಳದವರು ಗಸ್ತು ಇದ್ದು, ಆಚರಣೆಯಲ್ಲಿ ಯಾವುದೇ ಘಟನೆಗಳು ಜರುಗದಂತೆ ಜಾಗೃತಿ ವಹಿಸಿದ್ದರು.

# ನಕಲು ತಡೆಗೆ ಕೇಂದ್ರಗಳಲ್ಲಿ ಸಿಸಿ ಕ್ಯಾಮರ

## ಎಸ್.ಎಸ್.ಎಲ್.ಸಿ ಪರೀಕ್ಷೆ 10 ಕೇಂದ್ರದಲ್ಲಿ 2720 ವಿದ್ಯಾರ್ಥಿಗಳ ಹಾಜರಿ : 24ಗೈರು ಹಾಜರಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ರಾಜ್ಯಾಧ್ಯಂತ ಆರಮಭವಾಗಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಗಳು, ತಾಲೂಕಿನಲ್ಲಿಯೂ ಪ್ರಥಮ ಭಾಷೆಯೊಂದಿಗೆ ಆರಂಭವಾಯಿತು. ತಾಲೂಕಿನಲ್ಲಿ 10ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದ್ದು, ಪರೀಕ್ಷೆಗಳು ಸುಗಮವಾಗಿ ಜರುಗಿದವು.

ಈ ಕುರಿತು ತಾಲೂಕು ಶಿಕ್ಷಣಾಧಿಕಾರಿ ಮೈಲೇಶ್ ಬೇವೂರ್ ಮಾಹಿತಿ ನೀಡಿ, ಮಾ.25ರಿಂದ ಆರಂಭವಾಗುವ ಪರೀಕ್ಷೆಗಳು ಎಪ್ರೀಲ್ 06ರವರೆಗೂ ನಡೆಯಲಿವೆ ಎಂದ ಅವರು, ಈ ವೇಳೆ ನಕಲು ತಡೆಗಟ್ಟಲು, ಪರೀಕ್ಷ ಕೇಂದ್ರಗಳ ಸುತ್ತ 200ಮೀಟರ್ ನಿಷೇಧಾಜ್ಞೆ ಜಾರಿಯಾಗಿದ್ದು, ಆಯಾ ಕೇಂದ್ರದ ಪ್ರತಿಯೊಂದು ಆವರಣ ಮತ್ತು ಕೊಠಡಿಗಳಿಗೂ ಸಿಸಿ ಕ್ಯಾಮರಗಳನ್ನು ಅಳವಡಿಸಲಾಗಿದೆ. ಈ ಸಿಸಿ ಕ್ಯಾಮರದ ಮೂಲಕ ವೆಬ್ ಸಂಪರ್ಕಹೊಂದಿದ್ದು, ಜಿಲ್ಲಾ ಮತ್ತು ವಿಭಾಗೀಯ ಮಟ್ಟದಲ್ಲಿ ಅಧಿಕಾರಿಗಳು ನೇರ ಪರಿವೀಕ್ಷಿಸಬಹುದಾಗಿದ್ದು, ಅತ್ಯಂತ ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪಟ್ಟಣದ ಗಂಗಾವತಿ ಭೀಮಪ್ಪನವರ ಸರ್ಕಾರಿ ಪ.ಪೂ.ಕಾಲೇಜ್, ರೇಣುಕಾ ಸಂಯುಕ್ತ ಪ.ಪೂ. ಕಾಲೇಜ್, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸೇರಿದಂತೆ ವರಲಹಳ್ಳಿ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ, ಬ್ಯಾಸಗಿದೇರಿ ಸ.ಪ್ರೌಢಶಾಲೆ, ತಂಬ್ರಹಳ್ಳಿಯ ಕೆಪಿಜಿ ಪ್ರೌಢಶಾಲೆ, ಮೋರಗೆರೆಯ ಎನ್.ಡಿ.ಪ್ರೌಢಶಾಲೆ, ಹಂಪಸಾಗರ ಸೇವಾಲಾಲ್ ಪ್ರೌಢಶಾಲೆ, ವಲ್ಲಭಾಪುರ ಹಾಗೂ ಉಪನಾಯಕನಹಳ್ಳಿ ಮೊರಾರ್ಜಿ ವಸತಿ ಶಾಲೆಗಳಲ್ಲಿ ಕೇಂದ್ರಗಳಾಗಿದ್ದು, ಒಟ್ಟು 2744 ನೊಂದಾಯಿತ ವಿದ್ಯಾರ್ಥಿಗಳಾಗಿದ್ದು, ಅದರಲ್ಲಿ 1322 ವಿದ್ಯಾರ್ಥಿಗಳು, 1422 ವಿದ್ಯಾರ್ಥಿನಿಯರು ಇದರಲ್ಲಿ 1313 ವಿದ್ಯಾರ್ಥಿಗಳು, 1407 ವಿದ್ಯಾರ್ಥಿನಿಯರು ಹಾಜರಾಗವ ಮೂಲಕ 9ವಿದ್ಯಾರ್ಥಿಗಳು 15 ವಿದ್ಯಾರ್ಥಿನಿಯರು ಒಟ್ಟು 24ವಿದ್ಯಾರ್ಥಿಗಳು ಗೈರು ಆಗಿದ್ದು, ಒಟ್ಟು 2720 ವಿದ್ಯಾರ್ಥಿಗಳು ಪ್ರಥಮ ಪರೀಕ್ಷೆ ಬರೆದಿದ್ದಾರೆ ಎಂದರು. ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಸುನಿಲ್ ಕುಮಾರ್ ಹಾಗೂ ಪಿಡಬ್ಲೂಡಿ ಎಇಇ ಪುರುಷೋತ್ತಮ್‌ರು ತಾಲೂಕು ಜಾಗೃತಿ ದಳದವರಾಗಿದ್ದಾರೆ. ಪೊಲೀಸ್ ಇಲಾಖೆಯವರ ಸಹಕಾರದಿಂದ ಯಾವುದೇ ಅಡೆತಡೆಗಳಿಲ್ಲದೆ ಪರೀಕ್ಷೆ ಸುಗಮವಾಗಿ ಯಶಸ್ವಿಯಾಗಿದೆ ಎಂದರು.

# ನಲ್ಲಾಪುರ ಗ್ರಾಮಕ್ಕೆ ಸಿಇಓ ಭೇಟಿ: ವಾಂತಿ ಭೇದಿ ಪರಿಶೀಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಸೀತಾರಾಮ್ ತಾಂಡ ಗ್ರಾಮ ಪಂಚಾಯತಿ ವ್ಯಾಪ್ತಿಯ ನಲ್ಲಾಪುರ ಗ್ರಾಮದಲ್ಲಿ ವಾಂತಿ ಭೇದಿ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಮಾರ್ಚ 24ರಂದು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ವಾಂತಿ ಭೇದಿ ಪ್ರಕರಣಗಳ ಬಗ್ಗೆ ತೀವ್ರ ನಿಗಾವಹಿಸಲು ಸೂಚಿಸಿದರು. ತಾತ್ಕಾಲಿಕವಾಗಿ ಆಯುಷ್ ಇಲಾಖೆಯ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ನೀಡಲಾಗುತ್ತಿರುವುದನ್ನು ಸಿಇಓ ಅವರು ಒದೆ ವೇಳೆ ಪರಿಶೀಲಿಸಿದರು. ಅಲ್ಲಿನ ರೋಗಿಗಳೊಂದಿಗೆ ಮಾತನಾಡಿ ಅವರಿಗೆ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಹೊಸಪೇಟೆ ತಾಲೂಕಿನ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಉಮೇಶ್. ತಾಲೂಕು ಆರೋಗ್ಯಾಧಿಕಾರಿ ಭಾಸ್ಕರ್ ಮತ್ತಿತರರು ಇದ್ದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA